ಹೊಸ ಮನುಷ್ಯ



ಬೆಲೆ : ರೂ ೨೦-೦೦


ಚಿಂತನ ದರ್ಶನ ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ - ೧೭ ಡಿಸೆಂಬರ್ -೨೦೧೬ ಸಂಚಿಕೆ - ೫



ವಿಶೇಷ ಸಂಚಿಕೆ

ಸರ್ವೋದಯ ಸಮಾಜ ಸಮ್ಮೇಳನದ ಸಂದರ್ಭ

ಜನಪದ ವಿಚಾರದಲ್ಲಿ

ಡಿಸೆಂಬರ್– ೨೦೧೬

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ - ೨೦೧೬
ಸಂಪುಟ - ೧೭
ಸಂಚಿಕೆ - ೫

<u>ಸಂಪಾದಕ</u>

ಸುರೇಂದ್ರ ಕೌಲಗಿ

<u>ಸಲಹಾ ಸಮಿತಿ</u>

ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

<u>ಚಂದಾ ವಿವರ</u>

ವಾರ್ಷಿಕ : ರೂ ೨೦೦/-
ಬಿಡಿ ಸಂಚಿಕೆ : ರೂ ೨೦/-

<u>ಸಂಪರ್ಕ ವಿಳಾಸ</u>

ಜನಪದ ಸೇವಾ ಟ್ರಸ್ಟ್ (ರಿ)
ಮೇಲುಕೋಟೆ - 571431
ಮಂಡ್ಯ ಜಿಲ್ಲೆ

ಫೋನ್ : 9141700812
08236 - 299854
email :
janapada@yahoo.com
Web: janapada.org

ಕೇಳಿ ಗೆಳೆಯರೆ

ಕೇಳಿ, ಕೇಳಿ, ಗೆಳೆಯರೇ,
ದಿವ್ಯಮಂತ್ರಘೋಷವ!
ಏಳಿ, ಏಳಿ, ಬೇಗನೆ,
ಜಗದ ಗುಡಿಗೆ ಪೋಗುವ!

ಶಶಿಯು ರವಿಯು ತಾರಕೆಗಳು
ದೀಪವಾಗಲಿ;
ಕಾನನಗಳು ವಿಕಸಿತ ಸುಮ
ಮಾಲೆಯಾಗಲಿ;
ಮೇಲೆ ನಲಿವ ನೀಲಗಗನ
ಗೋಪುರಾಗಲಿ;
ಕಡಲು ತೊರೆ ತಟಾಕ
ಪಂಚಪಾತ್ರೆಯಾಗಲಿ;
ಜಲತರಂಗ ಚಾರುಧಾರೆ
ತೀರ್ಥವಾಗಲಿ,
ದಿವ್ಯಪುಷ್ಪಗಂಧವೆಮ್ಮ ಧೂಪವಾಗಲಿ;
ಕೋಕಿಲಾದಿ ವಿಹಗ ಗೀತ
ವಾದ್ಯವಾಗಲಿ,
ಹೃದಯ ಪ್ರೇಮವೆಮ್ಮ
ಧರ್ಮಶಾಸ್ತ್ರವಾಗಲಿ;
ಭಕ್ತಿಯೆಮ್ಮ ದಿವ್ಯ ಆತ್ಮಯಜ್ಞವಾಗಲಿ,
ಬ್ರಹ್ಮಯಜ್ಞಶಾಲೆ ಹೃದಯಪೀಠವಾಗಲಿ.

ಕೇಳಿ! ಕೇಳಿ, ಗೆಳೆಯರೇ!
ದಿವ್ಯಮಂತ್ರಘೋಷವ !
ಏಳಿ ಏಳಿ ಬೇಗನೆ!
ಜಗದ ಗುಡಿಗೆ ಪೋಗುವ!

–ಕುವೆಂಪು

ಚಿಂತನೆಗೊಂದು ಸಂಗತಿ

ಧನ ನಿಧನ

ಇಂದಿನ ಕೇಂದ್ರ ಸರ್ಕಾರವು ಐದುನೂರು ಮತ್ತು ಸಾವಿರ ರೂಪಾಯಿ ಮುಖ ಬೆಲೆಯ ನೋಟುಗಳ ಮೌಲ್ಯವನ್ನು ಅಪಗೊಳಿಸಿದೆ. ಅಪಮೌಲ್ಯಗೊಳಿಸಿದ ಕ್ರಿಯೆಯ ಹಿಂದೆ ಸರ್ಕಾರದ ಉದ್ದೇಶ ದೇಶದಲ್ಲಿ ಶ್ರೀಮಂತರೆನಿಸಿಕೊಳ್ಳುವವರ ಬಳಿ ತೆರಿಗೆಗಳ್ಳತನದಿಂದ, ಭ್ರಷ್ಟಚಾರದಿಂದ ಮತ್ತು ಲೂಟಿಮಾಡುವ ಪ್ರವೃತ್ತಿಯಿಂದ ಸಂಗ್ರಹಿಸಿಟ್ಟಿದ್ದ ಅಪಾರ ಧನ ಸಂಪತ್ತನ್ನು ನಿಧನಗೊಳಿಸಿ ಸ್ವಚ್ಛ ಮತ್ತು ಆರೋಗ್ಯಕರ ಮನಸ್ಸಿನ ಪ್ರಜೆಗಳನ್ನು ತಯಾರು ಮಾಡುವುದೆ ಆಗಿದೆ. ಇಂಥ ಶಸ್ತ್ರಚಿಕಿತ್ಸೆ ಹತ್ತು ವರ್ಷಗೊಳಿಗೊಮ್ಮೆ ಆಗಬೇಕೆಂಬ ವಿಚಾರವೂ ಇದೆ. ಏಕೆಂದರ ಸರ್ಕಾರ ಬಿಡುಗಡೆ ಮಾಡಿರುವ ನೂತನ ನೋಟುಗಳನ್ನು ಕಳ್ಳರು ಅತ್ಯಾಧುನಿಕ ತಂತ್ರಜ್ಞಾನದ ಸಹಾಯದಿಂದ ನಕಲಿ ನೋಟುಗಳನ್ನು ತಯಾರಿಸಬಹುದೆಂಬ ಶಂಕೆ ಇದೆ.

ತೆರಿಗೆಗಳ್ಳತನ ಮತ್ತು ಪ್ರಜಾಪಭುತ್ವ ಒಂದಕ್ಕೊಂದು ವಿರೋಧಾಭಾಸಾದ ಮಾತುಗಳಾಗಿವೆ. ಪ್ರಜಾಪ್ರಭುತ್ವದಲ್ಲಿ ಪ್ರಭುತ್ವ ಪ್ರಜೆಗಳದ್ದೇ ಆಗಿರುತ್ತದೆ. ಪ್ರಭುತ್ವ ತಾನು ಸಂಗ್ರಹಿಸಿದ ಧನವನ್ನು ಪ್ರಜೆಗಳ ಸರ್ವಾಂಗೀಣ ವಿಕಾಸಕ್ಕಾಗಿ ಉಪಯೋಗಿಸುತ್ತದೆ. ಜನ ಸಂಪಾದಿಸಿದ ಹಣ ತೆರಿಗೆಯ ರೂಪದಲ್ಲಿ ಸರ್ಕಾರಕ್ಕೆ ಹೋಗಿ ಪುನಃ ಜನತೆಯ ಕಡೆಗೆ ಬರುತ್ತದೆ. ಕಪ್ಪು ಹಣದ ಜನನಕ್ಕೆ ಕಾರಣವಾಗುವ ಪ್ರಜೆಗಳಲ್ಲಿರುವ ಜೀವನದ ಅಪಮೌಲ್ಯಗಳನ್ನು ಹೋಗಾಲಾಡಿಸಿ ಅವರ ಜೀವನದಲ್ಲಿ ಸಾರ್ಥಕ ಮೌಲ್ಯಗಳನ್ನು ಸ್ಥಾಪಿಸುವ ಕೆಲಸ ಆಗಬೇಕಿದೆ. ಆ ಕೆಲಸ ಸರ್ಕಾರದಿಂದ ಆಗಲಾರದು. ಅದನ್ನು ಸಮಾಜದಲ್ಲಿರುವ ಸಜ್ಜನರು, ಗುರುಹಿರಿಯರು, ಆಚಾರ್ಯ ಪುರುಷರು, ಬುಧಜನರು ಮಾಡಬೇಕು. ಜೀವನದ ಉದ್ದೇಶ ಆನಂದ. ಉಚಿತ ಮಾರ್ಗದಿಂದ ಸಂಪಾದಿಸಿದ ಧನ ಆನಂದಕ್ಕೆ ದಾರಿಯಾಗಬಲ್ಲದು. ಆದರೆ ಅಕರ್ಮಣ್ಯತೆ ಅಥವಾ ಲೂಟಿ ಮಾರ್ಗದಿಂದ ಸಂಪಾದಿಸಿದ ಹಣ ವ್ಯಕ್ತಿಯ ಮತ್ತು ಸಮಾಜದ ಆನಂದದ ಮತ್ತು ಆಧ್ಯಾತ್ಮಿಕ ಅಡಿಪಾಯವನ್ನೇ ಕಿತ್ತೊಗೆಯುತ್ತದೆ. ಅಂಥ ಧನ, ನಿಧನ; ವಿನಾಶವೇ ಗತಿ. ಇದೇ ಈಗ ಅಪಮೌಲೀಕರಣದಿಂದ ಆಗುತ್ತಿರುವುದು. ●

ಸರ್ವೋದಯ ಸಮಾಜ ಸಮ್ಮೇಳನಗಳು ಏಕೆ ಅಗತ್ಯ?

– ಸುರೇಂದ್ರ ಕೌಲಗಿ

ಡಿಸೆಂಬರ ೯ ಮತ್ತು ೧೦ ರಂದು ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿ ಕರ್ನಾಟಕ ರಾಜ್ಯ ಪ್ರಥಮ ಸಮಾಜ ಸಮ್ಮೇಳನ ನಡೆಯಲಿದೆ. ದೇಶದಲ್ಲಿ ಬೇರೆ ಬೇರೆ ರಾಜ್ಯಗಳಲ್ಲಿ ಅಖಿಲ ಭಾರತ ಸರ್ವೋದಯ ಸಮಾಜ ಸಮ್ಮೇಳನಗಳು ಪ್ರತಿವರ್ಷ ೧೯೪೮ ರಿಂದ ನಡೆಯುತ್ತಲಿವೆ. ಇದುವರೆಗೆ ೬೩ ಸಮ್ಮೇಳನಗಳು ನಡೆದಿವೆ. ಕರ್ನಾಟಕ ರಾಜ್ಯದಲ್ಲಿ ಪ್ರಥಮ ಸರ್ವೋದಯ ಸಮಾಜ ಸಮ್ಮೇಳನ ನಡೆಯುತ್ತಿರುವ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದ ಕೆಲವು ವಿಚಾರಗಳನ್ನು ಹಂಚಿಕೊಳ್ಳಲು ಪ್ರಯತ್ನಿಸಲಾಗಿದೆ.

ಇತ್ತೀಚೆಗೆ ಹಲವಾರು ನಕ್ಸಲ್‌ವಾದಿಗಳು ತಮ್ಮ ದೀರ್ಘಕಾಲದ ಅಜ್ಞಾತವಾಸವನ್ನು ಮತ್ತು ಅರಣ್ಯವಾಸವನ್ನು ಮುಗಿಸಿ ಸಮಾಜದ ಮುಖ್ಯವಾಹಿನಿಯೊಂದಿಗೆ ಸೇರಿಕೊಂಡಿದ್ದಾರೆ. ಅವರ ಆ ಶರಣಾಗತಿ ತೀವ್ರತಮ ಎಡಪಂಥೀಯ ವಿಚಾರದ ಹತಾಶಯ ಚಿಹ್ನೆಯಾಗಿದೆ. ನಕ್ಸಲ್‌ವಾದಿಗಳು ಯಾವ ತಾತ್ವಿಕ ವಿಚಾರಗಳ ಕಾರಣದಿಂದ ಪ್ರೇರಿತರಾಗಿ ಕ್ರಾಂತಿಮಾಡುವ ಉದ್ದೇಶದಿಂದ ಕಾಡು ಸೇರಿದ್ದರೋ ಆ ಉದ್ದೇಶವು ಕಾಲಕಳೆದರೂ ನೆರವೇರದೇ ಹೋದುದರಿಂದ ಅವರು ನಿರಾಶರಾಗಿ ಬಯಲಿಗೆ ಬಂದಿದ್ದಾರೆ, ಮುಖ್ಯವಾಹಿನಿ ಸೇರಿಕೊಂಡು ಸಾರ್ವಜನಿಕ ಕೆಲಸದಲ್ಲಿ ತೊಡಗಿದ್ದಾರೆ. ಸರ್ವೋದಯ ಕಾರ್ಯಕರ್ತರ ಸಹಾಯ ಪಡೆಯುತ್ತಿದ್ದಾರೆ. ಇದು ಸ್ವಾಗತಾರ್ಹ ಬೆಳವಣಿಗೆ.

ಇನ್ನು ಲೋಕವಿಖ್ಯಾತ ತೀವ್ರತರ ಎಡಪಂಥೀಯ ವಿಚಾರವಾಗಿರುವ ಸಾಮ್ಯವಾದ ಜಾಗತಿಕ ಮಟ್ಟಕ್ಕೆ ಏರಿ, ಒಂದು ಕಾಲಕ್ಕೆ ರಷ್ಯಾ ಮತ್ತು ಯೂರೋಪಿನ ಕೆಲ ದೇಶಗಳಲ್ಲಿ ಜಯಭೇರಿಯ ಜಾಗಟೆಯನ್ನು ಬಾರಿಸುತ್ತಿತ್ತು. ಸಾಮ್ಯವಾದಿ ಪಕ್ಷದ ಪ್ರಬಲ ಸರ್ಕಾರವುಳ್ಳ ದೇಶ ರಷ್ಯಾ ಆಗಿತ್ತು. ಕೆಲ ವರ್ಷಗಳ ಹಿಂದೆ ಆ ದೇಶದಲ್ಲಿಯ ಸಾಮ್ಯವಾದಿ ಸರ್ಕಾರ ಕುಸಿಯಿತು. ಆಗ ಇಡೀ ಸಾಮ್ಯವಾದ ಸಿದ್ಧಾಂತದ ಬೆನ್ನಲುಬು ಮುರಿದಂತಾಯಿತು. ಈಗ ರಷ್ಯಾ ಮತ್ತು ಚೀನಾ ದೇಶಗಳು ಸಾಮ್ಯವಾದ ಸಿದ್ಧಾಂತದಿಂದ ಬಹುದೂರ ಸರಿದಿವೆ. ಆ ದೇಶಗಳಲ್ಲಿಯೂ ಬಂಡವಾಳವಾದದ ಛಾಯೆ ದಟ್ಟವಾಗಿದೆ. ಆ ಎರಡು ದೇಶಗಳು ನಿರಂಕುಶ ವಿಚಾರದಿಂದ ತಮ್ಮ ದೇಶಗಳಲ್ಲಿ ಸೈನ್ಯ ಬಲವನ್ನು

ಕಟ್ಟುತ್ತಿವೆ ಮತ್ತು ವಿನಾಶಕಾರಿ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಿವೆ. ಈಗ ಅವುಗಳ ಉದ್ದೇಶ ಸಾಮ್ಯವಾದದ ಮೂಲ ವಿಚಾರವನ್ನಾಗಲೀ, ಆದರ್ಶವನ್ನಾಗಲೀ, ಜಾಗತಿಕ ಮಟ್ಟದಲ್ಲಿ ಜನಪ್ರೀಯವಾಗುವಂತೆ ಮಾಡುವುದರ ಬದಲು ಅಮೇರಿಕಾ ಮತ್ತು ಇತರ ಪಾಶ್ಚಿಮಾತ್ಯ ಮತ್ತು ಪೌರ್ವಾತ್ಯ ದೇಶಗಳನ್ನು ಹೇಗೆ ಮಣಿಸಬಹುದೆಂಬುದೇ ಮುಖ್ಯವಾಗಿದೆ. ಸಾಮ್ಯವಾದಿ ವಿಚಾರದ ಚೀನಾಕ್ಕಂತೂ ಭಾರತ ದೇಶವನ್ನು ಹೇಗಾದರೂ ಮಾಡಿ ಹಿಂದಕ್ಕೆ ಹಾಕಿ ತಾನು ಜಗತ್ತಿನಲ್ಲಿ ಅತ್ಯಂತ ಬಲಿಷ್ಠ ದೇಶವಾಗಬೇಕೆಂಬುದೇ ಗುರಿಯಾಗಿದೆ. ನೆರೆ ರಾಷ್ಟ್ರಗಳ ಭೂಮಿಯನ್ನು ಕಬಳಿಸುವ ಪ್ರಯತ್ನವನ್ನೂ ಮಾಡುತ್ತಿದೆ.

ತೀವ್ರತಮ ಸಾಮ್ಯವಾದಿ ವಿಚಾರದಿಂದ ದೂರವಾದರೂ ಸಾಮ್ಯವಾದದ ಚೈತನ್ಯವನ್ನು ತನ್ನಲ್ಲಿ ಇರಿಸಿಕೊಂಡು ಜನಪರ ಸಂಘಟನೆಯ ವಿಚಾರದ ಪ್ರತಿರೂಪವಾಗಿ ಸಮಾಜವಾದ ಹುಟ್ಟಿಕೊಂಡಿತು. ಅದನ್ನು ಪ್ರಭುತ್ವಾಧಾರಿತ ಸಮಾಜವಾದ (State Socialisam) ಎಂದು ಕರೆಯಲಾಗುತ್ತದೆ. ಆದರೆ ಜಗತ್ತಿನ ಯಾವುದೇ ದೇಶದಲ್ಲಿ ಅದು ಪರಿಪೂರ್ಣವಾಗಿ ಪ್ರಭುತ್ವ ಪಡೆದಂತೆ ಕಾಣುತ್ತಿಲ್ಲ. ದೇಶದ ಕೆಲ ರಾಜ್ಯಗಳಲ್ಲಿಯ ಸಮಾಜವಾದಿ ಪಕ್ಷ ಕೂಡ ತನ್ನ ವಿಚಾರಕ್ಕೆ ತಕ್ಕ ನೀತಿಯನ್ನು ಅನುಸರಿಸಲು ಸಾಧ್ಯವಾಗುವಂಥ ಸರಕಾರ ರಚಿಸಲು ವಿಫಲವಾಗಿದೆ. ಅಲ್ಲದೆ, ಪಕ್ಷದಲ್ಲಿಯ ಮುಖಂಡರ ಅಧಿಕಾರ ಲಾಲಸೆಯು ಕಾರಣದಿಂದ ಸಮಾಜವಾದಿ ಪಕ್ಷ ಒಡೆದು ಹೋಗಿದೆ, ದುರ್ಬಲವಾಗಿದೆ. ಭವಿಷ್ಯದಲ್ಲಿ ದೇಶಕ್ಕೊಂದು ಬಲವಾದ ಸಮಾಜವಾದಿ ಸರ್ಕಾರ ಅಧಿಕಾರಕ್ಕೆ ಬರುತ್ತದೆಂದು ಹೇಳಲು ಆಗುವುದಿಲ್ಲ.

ಈಗ ಮಾವೋವಾದ ಗುಪ್ತಗಾಮಿನಿಯಾಗಿ ಹರಿಯುತ್ತಿದೆ ಅದು ಅಷ್ಟೊಂದು ಪ್ರಖರವಾಗಿ ಪ್ರಕಟಗೊಳ್ಳುತ್ತಿಲ್ಲ ಮಾವೋವಾದಿಗಳೆಂದು ತಮ್ಮನ್ನು ಕರೆದುಕೊಳ್ಳುವ ಕಾರ್ಯಕರ್ತರು ಕಾಡಿನಲ್ಲಿ ಅಡಗಿಕುಳಿತಿದ್ದಾರೆ. ಅಮಾಯಕರನ್ನು, ಕಾವಲು ಪಡೆಯ ಸೈನಿಕರನ್ನು ಸಾಯಿಸುವ ಕೆಲಸ ಮಾಡುತ್ತಿದ್ದಾರೆ. ಹಿಂಸೆಯಲ್ಲಿಯೇ ನಂಬಿಕೆ ಇಟ್ಟಿರುವ ಮಾವೋವಾದಕ್ಕೆ ಸಮಾಜದಲ್ಲಿ ಹಚ್ಚಿನ ಅವಕಾಶ ಸಿಗುವುದಿಲ್ಲ.

ಇನ್ನು ಸಾಮಾನ್ಯ ಜನರನ್ನು ಆಕರ್ಷಿಸುತ್ತಿರುವ ಬಂಡವಾಳವಾದದ ಅನಿಷ್ಟಗಳನ್ನು ಎಷ್ಟು ಹೇಳಿದರೂ ಸಾಲದು. ಅದನ್ನು ವ್ಯಾಖ್ಯಾನಿಸುವುದು ಸುಲಭವಾದರೂ ವಿವರಿಸುವುದು ಕಷ್ಟ. ಆದ್ದರಿಂದ ಬಂಡವಾಳವಾದವೆಂಬ ನದಿಗೆ ಯಾವುದೇ ಕಟ್ಟುಪಾಡು ಇಲ್ಲ. ಪ್ರವಾಹಗೊಂಡ ನದಿ ಯಾವ ರೀತಿ ತನ್ನ ತೀರವನ್ನು ಮೀರಿ ಸುತ್ತಮುತ್ತಲಿನ ಸ್ಥಾವರ ಮತ್ತು ಜಂಗಮವನ್ನು ನಾಶಮಾಡುವುದೋ ಅದೇ ರೀತಿ ಯಾವ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ

ಅದು ಪ್ರವಹಿಸುವುದೋ ಅಲ್ಲೆಲ್ಲಾ ಅದು ವಿನಾಶವನ್ನು ಪ್ರವಹಿಸಿ ಹೋಗುವುದು. ವ್ಯಕ್ತಿಗಳನ್ನು, ಸಮಾಜವನ್ನು, ಕುಟುಂಬವನ್ನು ಕೂಡಿಸುವ ಬದಲು ಒಡೆದುಹಾಕುತ್ತದೆ. ಮನುಷ್ಯನ ಮನವನ್ನು ಒಡೆಯುತ್ತದೆ.. ದೇಶಗಳ ಮಧ್ಯೆ ಯುದ್ಧವನ್ನು ಉಂಟುಮಾಡುತ್ತದೆ. ಶ್ರಮವನ್ನೂ, ಶ್ರಮಜೀವಿಗಳನ್ನೂ ಕಾಲ್ಕಸ ಮಾಡುತ್ತದೆ. ದುಡಿಯುವ ಕೈಗಳನ್ನು ಸೋಮಾರಿ ಮಾಡಿ ಅವುಗಳ ಕೈಗೆ ಯಂತ್ರವನ್ನು ಕೊಡುತ್ತದೆ. ತನ್ಮೂಲಕ ಮನುಷ್ಯನನ್ನು ಯಂತ್ರದ ದಾಸನನ್ನಾಗಿ ಮಾಡುವ ತಂತ್ರಜ್ಞಾನವನ್ನು ಹುಟ್ಟುಹಾಕುತ್ತದೆ.. ಬಂಡವಾಳ ಹೂಡಿಕೆಗೆ ತಕ್ಕಂತೆ ಉದ್ಯೋಗಗಳು ಸೃಷ್ಠಿಯಾಗದೆ ನಿರುದ್ಯೋಗ ಹೆಚ್ಚಾಗಿ ಇಡೀ ಸಮಾಜಕ್ಕೆ ಗೆಜ್ಜಲು ಹತ್ತಿದಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ವಿಜ್ಞಾನ ಮತ್ತು ತಂತ್ರಜ್ಞಾನ, ಮನುಷ್ಯನಿಗೆ ವರವಾಗುವ ಬದಲು ಶಾಪವಾಗಿ ಪರಿಣಮಿಸಿವೆ. ದೇವರಿಂದ ಪಡೆದ ವರವನ್ನೇ ದೇವರ ನಾಶಕ್ಕೆ ಪ್ರಯೋಗಿಸಿದ ಭಸ್ಮಾಸುರನಂತೆ ಪ್ರಚಲಿತವಿರುವ ವಿಜ್ಞಾನ ಮತ್ತು ತಂತ್ರಜ್ಞಾನ ಮಾನವನನ್ನು ಹಾಳುಮಾಡಲು ಹೊರಟಿವೆ. ಅವು ಮಾನವನನ್ನು ಎಷ್ಟು ಮೋಹಿತಗೊಳಿಸಿವೆ ಅಂದರೆ ಹುಳು ದೀಪಕ್ಕೆ ಆಕರ್ಷಿತಗೊಂಡು ತನ್ನನ್ನೇ ತಾನೂ ಸುಟ್ಟಿಹಾಕುಕೊಳ್ಳುವಂಥ ಸ್ಥಿತಿ ಮನುಷ್ಯನದಾಗಿದೆ.

ಇಪ್ಪತ್ತೊಂದನೇ ಶತಮಾನ ಅಶಾಂತಿಯ ಮತ್ತು ಹಿಂಸೆಯ ಮತ್ತು ಲೂಟಿತನದ ಯುಗವಾಗಿದೆ. ಯಾರ ಮನದಲ್ಲಿಯೂ, ಮನೆಯಲ್ಲಿಯೂ, ಶಾಂತಿ ಇಲ್ಲವಾಗಿದೆ. ಜಗತ್ತಿನ ವಿವಿಧ ಪ್ರದೇಶಗಳಲ್ಲಿ ಆಂತರಿಕ ಯುದ್ಧಗಳು ಮತ್ತು ದೇಶಗಳ ಮಧ್ಯೆ ಅಘೋಷಿತ ಯುದ್ಧಗಳು ನಡೆಯುತ್ತಿವೆ. ಇಡೀ ಜಗತ್ತನ್ನು ಮತ್ತು ಅಲ್ಲಿರುವ ಜೀವಕೋಟಿಯನ್ನು ಕ್ಷಣಾರ್ಧದಲ್ಲಿ ನಾಶಮಾಡುವಂಥ ಭಯಾನಕ ಶಸ್ತ್ರಾಸ್ತಗಳು, ಸಾಧನ ಸಾಮಾಗ್ರಿಗಳು ಜಗತ್ತಿನ ಪ್ರತಿಯೊಂದು ದೇಶದಲ್ಲೂ ಇವೆ.

ಇಂದು ಅತ್ಯಂತ ಜ್ವಲಂತ ಸಮಸ್ಯೆ ಪರಿಸರ ವಿನಾಶ ಸಮಸ್ಯೆ. ಭೂಮಿ ಮೇಲಿನ ತಾಪಮಾನ ಹೆಚ್ಚಾಗುತ್ತಿದೆ. ನೀರಿನ ವಲಯ ಕಡಿಮೆಯಾಗುತ್ತಿದೆ. ಅತಿವೃಷ್ಠಿ ಸುನಾಮಿ, ಭೂಕಂಪ ಮುಂತಾದವುಗಳು ಹೆಚ್ಚಾಗುತ್ತಿವೆ. ಅರಣ್ಯ ಪ್ರದೇಶ ದಿನೇ ದಿನೇ ಕಡಿಮೆಯಾಗುತ್ತಿದೆ. ಗಾಳಿ ನೀರು ಮತ್ತು ಮಣ್ಣು ವಿಷಯುಕ್ತವಾಗಿದೆ. ಪರಿಸರದ ಈ ಭೀಕರ ಸಮಸ್ಯೆಯನ್ನು ಸಾಮ್ಯವಾದ, ಸಮಾಜವಾದ, ಮಾರ್ಕ್ಸವಾದ, ಮಾವೋವಾದ, ನಕ್ಸಲ್‌ವಾದ ಮತ್ತು ಬಂಡವಾಳವಾದ ಇತ್ಯಾದಿ, ಎಲ್ಲ ವಾದಗಳು ಪರಿಸರವನ್ನು ರಕ್ಷಿಸಲು ಸೋತಿವೆ. ಏಕೆಂದರೆ ಇವೆಲ್ಲಾ ವಾದಗಳು ಕೇವಲ ಭೌತಿಕ ಸುಖವನ್ನೇ ಪರಮೋಚ್ಚ ಎಂದು ವೈಭವೀಕರಿಸಿವೆ. ಎಡ-ಬಲ ಪಂಥೀಯ ವಿಂಗಡಣೆಗಳೇ ಆತ್ಯಂತಿಕವಾಗಿ

ದೋಷಪೂರ್ಣ ಮತ್ತು ಅಪಾಯಕಾರಿ ಎಂಬ ಮನವರಿಕೆ ಆಗುವ ಕಾಲ ಈಗ ಬಂದಿದೆ ಎಂದು ಸಮಾಜವಾದಿ ಚಿಂತಕ ಡಿ.ಎಸ್. ನಾಗಭೂಷಣ್ ಅಭಿಪ್ರಾಯಪಡುತ್ತಾರೆ.

ಬಲಪಂಥೀಯ ಮತ್ತು ಎಡಪಂಥೀಯ ವಿಚಾರಧಾರೆಗಳ ಅತಿರೇಕದಿಂದ ಬೇಸತ್ತಿರುವ ವಿಚಾರಕರು ಈ ಎರಡರ ಅತಿವಾದಗಳಿಂದ ಭಿನ್ನವಾದ ಮಧ್ಯಮ ಮಾರ್ಗದ ಬಗ್ಗೆ ಯೋಚನೆ ಮಾಡುತ್ತಿದ್ದಾರೆ. ಮಧ್ಯಮ ಮಾರ್ಗವೆಂದರೆ ಮೌನ·ಮಾರ್ಗವಲ್ಲ. ಸರ್ವೋದಯ ಸಿದ್ಧಾಂತ ಮಧ್ಯಮ ಮಾರ್ಗವಾಗಬಲ್ಲದು. ಸರ್ವೋದಯ ಮಾರ್ಗ ಖಂಡಿತವಾಗಿಯೂ ಮೌನಮಾರ್ಗವಲ್ಲ ಅದು ತನ್ನ ನಿಲುವನ್ನು ಸತ್ಯಾಗ್ರಹ, ಅಸಹಕಾರ ಮತ್ತು ಸೆವಿನಯ ಪ್ರತಿರೋಧ ಮುಂತಾದ ಅಹಿಂಸಾತ್ಮಕ ಮಾರ್ಗಗಳ ಮೂಲಕ ತನ್ನ ಮೌನವನ್ನು ಮುರಿಯುತ್ತದೆ. ಸತ್ಯ ಮತ್ತು ಅಹಿಂಸೆಯಲ್ಲಿ ಪೂರ್ಣವಾಗಿ ನಂಬಿಕೆ ಇಟ್ಟಿರುವವರು ಸರ್ವೋದಯ ಸಿದ್ಧಾಂತದ ಮಧ್ಯಮ ಮಾರ್ಗವನ್ನು ಅನುಸರಿಸಬಹುದು.

ಮನುಷ್ಯನ ಮನಸ್ಸು ದಿನೇ ದಿನೇ ಸಂಕುಚಿತಗೊಳ್ಳುತ್ತಿದೆ. ವೈರುಧ್ಯದ ಸಂಗತಿಯೇನೆಂದರೆ ವಿಶಾಲವಾದ ಜಗತ್ತು ವಿಜ್ಞಾನ ಮತ್ತು ತಂತ್ರಜ್ಞಾನದ ಕಾರಣದಿಂದ ಕಿರಿದಾಗುತ್ತಿದ್ದರೆ, ವಿಶಾಲವಾಗಿರಬೇಕಾದ ಮನಸ್ಸು ಸಂಕುಚಿತಗೊಳ್ಳುತ್ತಿದೆ. ಇಂಥ ವೈರುಧ್ಯದ ಮನೋಸ್ಥಿತಿಯಲ್ಲಿ ಇರುವ ಮನುಷ್ಯ ದಿಕ್ಕುಗಾಣದೆ ಒದ್ದಾಡುತ್ತಿದ್ದಾನೆ. ಮಾನವನ ಇಂದಿನ ಸ್ಥಿತಿಯನ್ನು ಡಿ.ವಿ.ಜಿ.ಯವರ ಕಗ್ಗದ ಈ ಮಾತಿನಲ್ಲಿ ವರ್ಣಿತವಾಗಿದೆ:-

"ಹಳೆಯ ಭಕ್ತಿ ಶ್ರದ್ಧೆಗಳೆಲ್ಲ ಅಳಿಸಿ ಹೋಗಿವೆ ಮಾಸಿ ಸುಳಿದಿಲ್ಲವಾವ ಹೊಸ ದರ್ಶನದ ಹೊಳಪುಂ

ಪಳಗಿದ್ದ ಮನೆಬಿದ್ದ ಕುಂಟ ಕುರುಡನ ತೆರದಿ ತಳಮಳಿಸುತಿದೆ ಲೋಕ ಮಂಕುತಿಮ್ಮ"

ಮೇಲ್ಕಾಣಿಸಿದ ಸಂಗತಿಗಳನ್ನು ಯೋಚಿಸಿದಾಗ ಈ ಎಲ್ಲ ಸಮಸ್ಯೆಗಳಿಗೆ ಪರಿಹಾರವೇನು ಎಂಬ ಪ್ರಶ್ನೆ ನಮ್ಮನ್ನು ಕಾಡುತ್ತಿದೆ. ಇಂದಿನ ಎಲ್ಲಾ ಸಮಸ್ಯೆಗಳು ಮಾನವ ನಿರ್ಮಿತವೇ ಆಗಿವೆ. ಆದ್ದರಿಂದ ಆ ಸಮಸ್ಯೆಗಳ ಪರಿಹಾರವು ಕೂಡ ಮಾನವ ಪ್ರಯತ್ನದಿಂದಲೇ ಆಗಬೇಕಿದೆ.

" ಬಂಧನ ಬಂದಿತು ಇಲ್ಲಿಂದಲೋ
ಬಿಡುಗಡೆ ಇಂದೂನು ಇಲ್ಲಿಂದಲೋ"

ಎಂಬ ಉಕ್ತಿಯಲ್ಲಿ ಕವಿ ಬೇಂದ್ರೆಯವರು ಸೂಚಿಸಿದಂತೆ ನಮ್ಮ ಇಂದಿನ ಸಮಸ್ಯೆಗಳಿಗೆಲ್ಲ ನಾವೇ ಪರಿಹಾರ ಕಂಡುಕೊಳ್ಳಬೇಕಿದೆ.

ಆ ಪರಿಹಾರ ಜಗತ್ತಿನ ಎಲ್ಲ ರಾಜಕೀಯ ಸಿದ್ಧಾಂತಗಳನ್ನು ಮೀರಿ

ಇರುವ ಸರ್ವೋದಯ ಸಿದ್ಧಾಂತ. ಅದು ಧ್ರುವತಾರೆಯಂತಿದೆ; ಅದನ್ನು ನಂಬಿಕೊಂಡವರಿಗೆ ಆಗಾಗ್ಗೆ ತತ್ವಾಂತರಿಯಾಗುವ ಭಯವಿಲ್ಲ. ಸುಮಾರು ೨೦೦೦ ವರ್ಷಗಳಷ್ಟು ಹಿಂದಿನಿಂದ ಜೀವನದ ಎಲ್ಲಾ ಪ್ರಕಾರದ ಅನುಭವಗಳ ಮೂಸೆಯಿಂದ ಹೊರಬಂದಿರುವಂಥ ಸಿದ್ಧಾಂತ ಜಗತ್ತಿನ ಎಲ್ಲ ಶ್ರೇಷ್ಠ ಗ್ರಂಥಗಳಾದ ಬೈಬಲ್, ಕುರಾನ್, ಸುಫಿ ಸಾಹಿತ್ಯ, ವಚನ ಸಾಹಿತ್ಯ, ಗೀತೆ ಮತ್ತು ಉಪನಿಷತ್‌ಗಳು ಪ್ರತಿಪಾದಿಸಿರುವುದು. ಸರ್ವೋದಯ ಸಿದ್ಧಾಂತವನ್ನೇ ಸಮಸ್ತ ಜೀವಕುಲದ ಉದ್ಧಾರ ಆಗಬೇಕೆಂಬ ಘನ ಉದ್ದೇಶವನ್ನು ಇಟ್ಟಿಕೊಂಡಿರುವುದು ಸರ್ವೋದಯ ಸಿದ್ಧಾಂತ. ಯಾವುದೇ ಭೇದ ಭಾವವಿಲ್ಲದೆ ಎಲ್ಲರ ಏಳಿಗೆಯನ್ನು ಬಯಸುವ ವಿಚಾರ ಸರ್ವೋದಯ ಸಿದ್ಧಾಂತ. ಇಡೀ ಜಗತ್ತಿನ ಜೀವನ ವ್ಯಾಪಾರದ ಮೂಲೆಗಲ್ಲಾಗಿರುವ ಸತ್ಯ ಮತ್ತು ಅಹಿಂಸೆಯ ಮೇಲೆ ನಿಂತಿರುವ ಸಿದ್ಧಾಂತ ಸರ್ವೋದಯ.

ಪ್ರಜಾಪ್ರಭುತ್ವವಾದಿ ದೇಶದಲ್ಲಿ ಪ್ರಜೆಗಳೆ ಸಾರ್ವಭೌಮರಾಗಿರುವುದರಿಂದ ಪ್ರಜೆಗಳು ತಮ್ಮ ಸಾಮಾಜಿಕ ಹೊಣೆಗಾರಿಕೆ ಮತ್ತು ಕರ್ತವ್ಯಗಳನ್ನು ಸುಯೋಗ್ಯವಾಗಿ ನಿರ್ವಹಿಸಬೇಕಾದುದು ಅಗತ್ಯವಾಗಿದೆ. ಅದಕ್ಕಾಗಿ ಪ್ರಜೆಗಳನ್ನು ಸಿದ್ಧಪಡಿಸಲು ನಡೆಯಬೇಕಾದ ಪ್ರಯತ್ನಗಳಲ್ಲಿ ರಾಜಕೀಯ ಪಕ್ಷಗಳ ಸಮಾವೇಶಗಳು ಉಪಯೋಗಕ್ಕೆ ಬರಲಾರವು ಏಕೆಂದರೆ ಅವುಗಳ ದೃಷ್ಟಿಕೋನ ಏಕಮುಖವಾಗಿರುತ್ತದೆಯೆಹೊರೆತು ಸಮಗ್ರವಾಗಿರುವುದಿಲ್ಲ. ಆದ್ದರಿಂದ ಪ್ರಜೆಗಳಲ್ಲಿ ಪ್ರಜಾಪ್ರಭುತ್ವಕ್ಕೆ ಅನುಗುಣವಾದ ಗುಣಗಳನ್ನು ಅರಳಿಸುವ ಕೆಲಸವನ್ನು ಯಾವುದೇ ರಾಜಕೀಯ ಅಧಿಕಾರದ ಅಭಿಲಾಷೆಯಿಲ್ಲದೆ ಕೇವಲ ಸಮಸ್ತ ಸಮಾಜದ ಹಿತಚಿಂತನೆ ಮಾಡುವ ರಾಜಕೀಯೇತರ ಮತ್ತು ಗಾಂಧೀ ಸಿದ್ಧಾಂತ ಪ್ರಣೀತ ಸರ್ವೋದಯ ಸಮಾಜ ಸಮ್ಮೇಳನಗಳು ಮಾತ್ರ ಮಾಡಲು ಸಾಧ್ಯ. ಅಲ್ಲಿ ಯಾವುದೇ ಸಂಘಟನೆಯ ಯಾವುದೇ ಸದಸ್ಯತ್ವದ ಹಂಗಿಲ್ಲದೆ ಮುಕ್ತ ಮನಸ್ಸಿನ ಜನರು ಸೇರಿ ಸಾರ್ವಜನಿಕ ಹಿತಾಸಕ್ತಿಯ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾಗಿದೆ. ಇಂಥ ಸಮ್ಮೇಳನಗಳು ಜನಶಕ್ತಿಯನ್ನು ಬಲಪಡಿಸಿ ರಾಜ್ಯ ಶಕ್ತಿ ಮತ್ತು ದಂಡಶಕ್ತಿಗಳ ಮೇಲೆ ನಿಯಂತ್ರಣ ಇರಿಸಿಕೊಳ್ಳುವ ನೈತಿಕ ಲೋಕ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ.

ಮನುಜಮತದಿಂದ ವಿಶ್ವಪಥ, ವಿಶ್ವಪಥದಿಂದ ಸರ್ವೋದಯ , ಸಮನ್ವಯ ಮತ್ತು ಪೂರ್ಣದೃಷ್ಟಿ. ಇಂಥ ಶ್ರೇಷ್ಠ ವಿಚಾರಗಳನ್ನು ಜಗತ್ತಿನಲ್ಲೆಲ್ಲಾ ಹರಡಬೇಕಾಗಿರುವುದು ಇಂದಿನ ಕಾಲದ ಮತ್ತು ಎಲ್ಲ ಬುಧ ಜನರ ಕರ್ತವ್ಯವಾಗಿದೆ. ಆ ಕರ್ತವ್ಯವನ್ನು ನಿರ್ವಹಿಸುವ ಮಾರ್ಗಗಳೇ ಸರ್ವೋದಯ ಸಮಾಜ ಸಮ್ಮೇಳನಗಳು. ಆದ್ದರಿಂದ ಅವುಗಳು ಅಗತ್ಯ.

ಸತ್ತಿದ್ದಾರೆಂದುಕೊಂಡವರು ಎದುರುಬದುರು ಆದಾಗ!

-ದೇವನೂರು ಮಹಾದೇವ

(ಅಸ್ಪೃಶ್ಯತಾ ನಿವಾರಣೆಯ ವಿಷಯದಲ್ಲಿ ಗಾಂಧೀ ಮತ್ತು ಅಂಬೇಡ್ಕರ್ ಮಾರ್ಗ ಮತ್ತು ಆದ್ಯತೆಗಳು ಭಿನ್ನವಾಗಿದ್ದರೂ ಸಹ ಅವರಿಬ್ಬರು ಪರಿಸ್ಪರ ಹೇಗೆ ಗೌರವಾನ್ವಿತವಾಗಿದ್ದರೂ ಎಂಬುದನ್ನು ಈ ಲೇಖನ ಚಿತ್ರಸುತ್ತದೆ.)

ಗ್ರಾಮಸ್ವರಾಜ್: ಗಾಂಧೀ ಅಂಬೇಡ್ಕರ್ - ಒಂದು ಅನುಸಂಧಾನ ಈ ಚರ್ಚೆಗೆ ನೀವೂ ಬನ್ನಿ ಎಂದು ನನ್ನನ್ನು ಕರೆದಾಗ 'ಏನು ಜಗಳವನ್ನು ಸರಸ ಮಾಡಬೇಕು ಅಂತಿದ್ದಿರಾ ಹೇಗೆ? ಎಂದು ತಮಾಷೆ ಮಾಡಿದೆ. ಆ ಇಬ್ಬರ ನಡುವೆ ಜಗಳ ಇಂದೂ ನಡೆಯುತ್ತಿದೆ. ಅದು ತೀವ್ರವಾಗೂ ಇದೆ. ಇದರ ಅರ್ಥ - ಆ ಇಬ್ಬರೂ ಇನ್ನೂ ಸತ್ತಿಲ್ಲ ಅಂತಲೇ ಅರ್ಥ. ಇಂದೂ ಅವರು ಹೆಚ್ಚು ಜೀವಂತವಾಗಿದ್ದಾರೆ ಅಂತಲೂ ಅರ್ಥ.

ಇದನ್ನು ನಾನು ಒಂದು ಶುಭಸೂಚನೆಯಾಗಿ ನೋಡುತ್ತೇನೆ. ಜಾಗತೀಕರಣದ ಅಟ್ಟಹಾಸದಲ್ಲಿ ವ್ಯಾಪಾರ ಕುಣಿದು ಕುಪ್ಪಳಿಸುತ್ತಾ ಈ ವ್ಯಾಪಾರವೇ ಆಳ್ವಿಕೆಯಾಗಿ ಎಲ್ಲಾ ಸೈದ್ಧಾಂತಿಕ ಆಲೋಚನೆಗಳೂ, ಹೋರಾಟಗಳೂ ಕಣ್ಮರೆಯಾಗುತ್ತಿವೆ ಎಂದು ಎಲ್ಲರೂ ನಂಬುತ್ತಿರುವ ಈ ದುಃಸ್ಥಿತಿಯಲ್ಲಿ ಈ ಇಬ್ಬರ ಜೀವಂತಿಕೆಯು ಮುಳುಗುವವರಿಗೆ ಒಂದು ಹುಲ್ಲು ಕಡ್ಡಿ ಸಿಕ್ಕಂತೆ ನನಗೆ ಕಾಣಿಸುತ್ತದೆ.

ಇವರ ಜಗಳಕ್ಕೆ ಹೋಗುವ ಮುನ್ನ ಈ ಜಗಳಾಡುವವರ ನಡುವೆ ಆಗಾಗ ಮಿಂಚಿನಂತೆ ಕಾಣುವ ಪರಸ್ಪರ ಗೌರವ, ನಂಬಿಕೆ, ಮೆಚ್ಚಿಗೆಗಳ ಒಂದೆರಡು ಉದಾಹರಣೆಗಳನ್ನು ಕೊಡುವೆ. ನಂತರ ಜಗಳಕ್ಕೆ ಖಂಡಿತ ಹೋಗುವ.

ಭಗವಾನ್‌ದಾಸ್ ಅವರು ಸಂಪಾದಿಸಿರವ 'ದಸ್ ಸ್ಪೋಕ್ ಅಂಬೇಡ್ಕರ್' ಮೊದಲ ಸಂಪುಟದಲ್ಲಿನ ಉಲ್ಲೇಖದಂತೆ ಅಂಬೇಡ್ಕರ್ ಅವರು ಗಾಂಧೀಯವರ ಬಗ್ಗೆ ಪೂನಾ ಒಪ್ಪಂದದ ನಂತರ ಕೊಟ್ಟ ಹೇಳಿಕೆಯಲ್ಲಿ 'ನನ್ನ ಮತ್ತು ಆತನ (ಗಾಂಧೀ) ಮಧ್ಯೆ ಎಷ್ಟೊಂದು ಸಾಮ್ಯವಿದೆ ಎಂಬುದನ್ನು ಆತನನ್ನು ಭೇಟಿ

ಮಾಡಿದಾಗ ತಿಳಿದು ನನಗೆ ಆಶ್ಚರ್ಯವಾಗಿದೆ. ಅತ್ಯಾಶ್ಚರ್ಯವಾಗಿದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ' ಎನ್ನುತ್ತಾರೆ. ಇದನ್ನು ಯಾವ ರೀತಿ ಅರ್ಥ ಮಾಡಿಕೊಳ್ಳೋಣ? ಹಾಗೇ ಗಾಂಧೀ ೧೯೪೬ರಲ್ಲಿ ಗೋರಾ ಅವರ ಅಳಿಯನಿಗೆ 'ನೀನು ಅಂಬೇಡ್ಕರ್‌ರಂತೆ ಆಗಬೇಕು. ನೀವು ಅಸ್ಪೃಶ್ಯತೆಯ ಹಾಗೂ ಜಾತಿಯ ನಿರ್ಮೂಲನಕ್ಕಾಗಿ ಕೆಲಸ ಮಾಡಬೇಕು. ಯಾವ ಬೆಲೆ ತೆತ್ತಾದರೂ ಸರಿಯೇ ಅಸ್ಪೃಶ್ಯತೆಯು ಹೋಗಲೇಬೇಕು' ಎಂದು ಹೇಳುತ್ತಾರೆ. ಇದನ್ನು ಹೇಗೆ ಅರ್ಥ ಮಾಡಿಕೊಳ್ಳೋಣ? 'ಸಂಸ್ಕೃತಿ ಕಥನ'ದಲ್ಲಿ ಡಿ.ಆರ್. ನಾಗರಾಜ್ ದಾಖಲಿಸಿರುವಂತೆ ಎಲ್ಲರೂ ಗಾಂಧೀಗೆ ಮಹಾತ್ಮ ಎನ್ನುತ್ತಿದ್ದಾಗ ಆ ಮಹಾತ್ಮನೇ ಅಂಬೇಡ್ಕರರನ್ನು ಮಹಾತ್ಮ ಅನ್ನುತ್ತಾರೆ. ಇದೇನು? ಇದೆಲ್ಲವೂ, ಅವರ ಈ ಜಗಳವೂ ಆ ಮಹಾತ್ಮರಿಬ್ಬರ ಕೊಡುಕೊಳ್ಳುವಿಕೆಯೇ?

ಹೀಗಿದ್ದೂ ಯಾಕೆ ವಿರಸ ಎಂದು ನೋಡಿದರೆ – ಗಾಂಧೀ ಹುಟ್ಟುತ್ತ ಸನಾತನಿ, ಕರ್ಮಠ. ನಡೆಯುತ್ತಾ, ಎಡವುತ್ತಾ, ಬೆಳೆಯುತ್ತಾ ಪ್ರಗತಿಪರ. ಭಾರತವನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಂಡಿರುವ ಆ ಸನಾತನಿಗಳೂ, ಕರ್ಮಠರೂ ಕೂಡ ತನ್ನೊಡನೆ ಹೆಜ್ಜೆ ಇಡುತ್ತಿರುವವರೆ ಇಲ್ಲವೆ ಎಂಬುದನ್ನು ಸದಾ ಕಡೆಗಣ್ಣಿನಿಂದಲೇ ಗಮನಿಸುತ್ತ ಅವರನ್ನೂ ಜೊತೆಜೊತೆಗೇ ಎಳೆದುಕೊಂಡು ಹೆಜ್ಜೆಇಡುವಾತ ಗಾಂಧೀ. ಹಾಗೇ ಇತಿಹಾಸಕಾರ ಎಸ್.ಚಂದ್ರಶೇಖರ್ 'ಗಾಂಧೀಜಿಯ ಕಾರ್ಯ ರಾಜಕೀಯದಿಂದ ಸಾಮಾಜಿಕದತ್ತ ಇಳಿದು ಬಂದರೆ, ಅಂಬೇಡ್ಕರ್ ಅವರು ಸಾಮಾಜಿಕ ಕಾರ್ಯದಿಂದ ರಾಜಕೀಯ ಕಣಕ್ಕೆ ಏರಿದವರು' ಎಂದು ಹೇಳುತ್ತಾರೆ. ಈ ಬಗೆಯ ಚಲನೆ ಕಾರಣವಾಗಿ ಗಾಂಧೀ ಅಂಬೇಡ್ಕರ್ ನಡುವ ಘರ್ಷಣೆ ಉಲ್ಬಣಗೊಂಡಿತೆ? ಜೊತೆಗೆ ಇಬ್ಬರೂ ಸಮಕಾಲೀನರು. ಆಯಾ ದಿನಕ್ಕೆ ಪ್ರತಿಕ್ರಿಯಿಸಲೇಬೇಕಿತ್ತು. ಇದರೊಡನೆ ದುಂಡುಮೇಜಿನ ಪರಿಷತ್‌ನಲ್ಲಿ ಗಾಂಧೀ ಕ್ಷುದ್ರವಾಗಿ ನಡೆದುಕೊಂಡು ಅಂಬೇಡ್ಕರ್‌ಗೆ ಗಾಯಮಾಡಿಬಿಟ್ಟರು. ಈ ಎಲ್ಲಾ ಹಿನ್ನೆಲೆಯಲ್ಲಿ ಅಂಬೇಡ್ಕರ್‌ರ ಪ್ರತಿಕ್ರಿಯೆಗಳನ್ನು ಅರ್ಥಮಾಡಿಕೊಳ್ಳಬೇಕೇ ಹೊರತು ಅಂದರೆ ಆಯಾ ಕಾಲದ ಪ್ರತಿಕ್ರಿಯೆಗಳನ್ನು ಆಯಾ ಕಾಲದ ಸಂದರ್ಭಕ್ಕೆ ಮಾತ್ರ ಸೀಮಿತಗೊಳಿಸಿ ಅವರನ್ನು ಒಟ್ಟಾಗಿ ಅರ್ಥಮಾಡಿಕೊಳ್ಳಬೇಕೇ ಹೊರತು ಅವರ ಸಾಂದರ್ಭಿಕ ಅಭಿಪ್ರಾಯಗಳನ್ನು ಕಟ್ಟುಗಾಜು ಹಾಕಿಸಿ ಸ್ಥಿರಗೊಳಿಸಿ ನೇಣಿಗೇರಿಸಬಾರದು. ಹಾಗೇ ಗಾಂಧೀಯನ್ನೂ ಕೂಡ.

ಅವರ ಜಗಳ ಹಾಗೂ ಜಟಾಪಟಿಗೆ ಗಾಂಧೀ ಮತ್ತು ಅಂಬೇಡ್ಕರರ ಗ್ರಹಿಕೆಗೆ ಭಾರತದ ಹಳ್ಳಿಯ ಹೇಗೆ ಕಾಣುತಿತ್ತು ಎಂಬುದೂ ಮುಖ್ಯವಾಗುತ್ತದೆ.

ಗಾಂಧೀ ಹಳ್ಳಿಯನ್ನು ಸ್ವಯಂಭೂ ಸ್ವರ್ಗವಾಗಿಸುವ ಕನಸು ಕಂಡವರು. ಆದರೆ ಅಂಬೇಡ್ಕರ್ ಹಳ್ಳಿಗಳನ್ನು ನರಕದ ಕೂಪ ಅಂದುಕೊಂಡಿದ್ದರು. ಹಳ್ಳಿಯೇ ಭಾರತಕ್ಕೆ ಮೋಕ್ಷ ಎಂದು ಗಾಂಧೀ ಅಂದುಕೊಡಿದ್ದರೆ, ಅಂಬೇಡ್ಕರ್ ಭಾರತದಿಂದಲೇ ಹಳ್ಳಿಯನ್ನು ಮೋಕ್ಷ ಮಾಡಬೇಕು ಅಂದುಕೊಂಡಿದ್ದರು. 'ಒಬ್ಬರಿಗೆ ರಮ್ಯ ಕನಸಾದರೆ ಇನ್ನೊಬ್ಬರಿಗೆ ಕಟು ಆಸ್ತವವಾಗಿತ್ತು' – ಆಗ ವಾಸ್ತವವೂ ಹಾಗೆ ಇತ್ತು. ಹಳ್ಳಿಗಳ ತಳಸಮುದಾಯಗಳು ಉಸಿರಾಡದೆ ಇದ್ದವು. ಆಗ ಅಂಬೇಡ್ಕರರಿಗೆ ಹಳ್ಳಿ ದುಃಸ್ವಪ್ನದಂತೆ ಕಂಡಿದ್ದರೆ ಅದರಲ್ಲೇನು ಆಶ್ಚರ್ಯ? ಆದರೆ ಈಗ? ಈಗ ಯಾವುದೇ ಒಂದು ಹಳ್ಳಿ ನೋಡಿದರೆ, ಮಂಡಲ ಪಂಚಾಯ್ತಿ ವ್ಯವಸ್ಥೆ ಬಂದ ಮೇಲೆ ಎಲ್ಲಾ ಜಾತಿಗಳ ಒಳಗೂ ನಾಕಾರು ಪಕ್ಷಗಳಿಗೆ ಅನುಗುಣವಾಗಿ ನಾಕಾರು ಗುಂಪುಗಳಾಗಿವೆ. ಇದು ಪಕ್ಷ ಸ್ಪರ್ಧೆ ಕಾರಣವಾಗಿ ತಾತ್ಕಾಲಿಕ ನಿಜ. ಈ ಕ್ರಿಯೆಯೊಳಗೆ ಜಾತಿಬಿಟ್ಟ ಚಲನೆಯೂ ಸ್ವಲ್ಪವಾದರೂ ಇದೆ. ಇದನ್ನೂ ನಾವು ಗಮನಿಸಬೇಕು. ಜೊತೆಗೆ ಮಂಡಲ ಪಂಚಾಯ್ತಿ ಅಧಿಕಾರ ಸ್ಥಾನಮಾನಗಳಿಗೆ ಮೀಸಲಾತಿ ಬಂದು ನಮ್ಮೂರಲ್ಲೇ ದಲಿತ ಹೆಣ್ಣುಮಗಳೊಬ್ಬಳು ಅಧ್ಯಕ್ಷೆಯೂ ಆಗಿಬಿಟ್ಟಳು. ನನ್ನ ಬಾಲ್ಯದಲ್ಲಿ ಆ ಊರಿನ ಗ್ರಾಮಪಂಚಾಯ್ತಿ ಕಛೇರಿ ಒಳಕ್ಕೆ ಅಸ್ಪೃಶ್ಯರು ಹೋಗುವುದನ್ನು ಕಲ್ಪಿಸಿಕೊಳ್ಳಲೂ ಕಷ್ಟವಾಗುತ್ತಿದ್ದ ನನಗೆ ಇದಾಗಿರುವುದು ಕಣ್ಮುಂದೆ ಇದೆ. ಈ ಚಲನೆಯನ್ನೂ ನಾವು ಕಾಣಬೇಕಲ್ಲವೇ?

ಈ ಗೊಂದಲದೊಳಗೆ ನಾವು ಗಾಂಧೀಯವರ ಸಮಕಾಲೀನರಾಗಿ ನೋಡಿದರೆ, ಗಾಂಧೀಯವರ ೧೯೨೦ರ ಸುಮಾರಿನ ಅಭಿಪ್ರಾಯಗಳನ್ನು ಅಂದರೆ ೧. ಹಿಂದೂಧರ್ಮ ಜಾತಿಪದ್ಧತಿಯ ಆಧಾರದ ಮೇಲೆ ಸ್ಥಾಪಿತ. ೨. ಸ್ವರಾಜ್ಯದ ಬೀಜಗಳು ಜಾತಿಪದ್ಧತಿಯಲ್ಲಿವೆ. ೩. ಸಮಾಜದ ನಿಯಂತ್ರಣಕ್ಕೆ ಮತ್ತೊಂದು ಹೆಸರೇ ಜಾತಿ. ೪. ರಾಷ್ಟ್ರೀಯ ಏಕತೆಗೆ ಸಹಭೋಜನ, ಅಂತರ್ಜಾತಿ ವಿವಾಹಗಳ ಅಗತ್ಯವಿಲ್ಲ. ೫. ಜಾತಿಪದ್ಧತಿ ಸಮಾಜವೊಂದರ ಸ್ವಾಭಾವಿಕ ಶ್ರೇಣೀಕರಣ. ೬. ಜಾತಿಪದ್ಧತಿ ನಾಶಪಡಿಸಲು ಯತ್ನಿಸುವ ಯಾರದೇ ಪ್ರಯತ್ನಗಳಿಗೂ ನನ್ನ ವಿರೋಧವಿದೆ ಇತ್ಯಾದಿ ೧೯೨೦ರ ಆಜುಬಾಜಿನ ಗಾಂಧೀ ಆಲೋಚನೆಗಳನ್ನು ನಾವೂ ಆ ಕಾಲಮಾನದಲ್ಲಿದ್ದರೆ ಅವನ್ನು ವಿರೋಧಿಸಬೆಕಾಗುತ್ತದೆ. ಪ್ರತಿಭಟಿಸಬೇಕಾಗುತ್ತದೆ, ಅಂಬೇಡ್ಕರ್ ಅವರಷ್ಟೇ ಉಗ್ರವಾಗಿ.

ಆದರೆ ಆ ಕರ್ಮಠ ಸನಾತನಿ ಗಾಂಧೀ ಅಲ್ಲೇ ಉಳಿಯುವುದಿಲ್ಲ. ದಿನದಿನವೂ ಸತ್ತು ದಿನದಿನವೂ ಹುಟ್ಟುತ್ತಾನೆ. ೧೯೨೮ರ ಹೊತ್ತಿಗೆ ಒಂದೇ

ವರ್ಣದ ಉಪಜಾತಿಗಳ ಜತೆ ಅಂತರ್‌ಜಾತಿ ವಿವಾಹವನ್ನು ಪ್ರೋತ್ಸಾಹಿಸುವ ಗಾಂಧೀ ಒಂದೊಂದೇ ಹೆಜ್ಜೆ ಇಡುತ್ತ ೧೯೪೬ರ ಹೊತ್ತಿಗೆ ಸುವರ್ಣ ಹಿಂದೂ ಮತ್ತು ಹರಿಜನರ ನಡುವೆ ನಡೆಯುವ ಅಂತರ್‌ವಿವಾಹಗಳಿಗೆ ಮಾತ್ರವೇ ತಾವು ಹೋಗುವುದಾಗಿ ನೇಮ ಮಾಡಿಕೊಳ್ಳುತ್ತಾರೆ. ಮುಂದೆ ವಧುವರರಲ್ಲೊಬ್ಬರು ಹರಿಜನರಲ್ಲದ ಪಕ್ಷದಲ್ಲಿ ಸೇವಾಗ್ರಾಮದಲ್ಲಿ ಮದುವೆಯಾಗುವ ಅವಕಾಶವನ್ನೇ ನಿರಾಕರಿಸುತ್ತಾರೆ. ಇನ್ನೂ ಮುಂದೆ 'ನಾವು ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಬೇಕೆಂದರೆ ಜಾತಿಯೂ ಹೋಗಲೇಬೇಕು' ಎಂಬಲ್ಲಿಗೆ ಬಂದು ನಿಲ್ಲುತ್ತಾರೆ. ೧೯೪೬ರ ಗಾಂಧೀ ಆಲೋಚನೆಗಳು ೧೯೨೦ರಲ್ಲಿಯೇ ಕಾಣಿಸಿಕೊಂಡಿದ್ದರೆ ಏನಾಗುತ್ತಿತ್ತು? ಭಾರತದ ಜಾತಿಧರ್ಮಗಳು ಆ ಗಾಂಧೀಯನ್ನೇ ಅಡ್ಡಡ್ಡ ನುಂಗಿ ನೊಣೆದುಬಿಡುತ್ತಿದ್ದವು. ಈ ಗಾಂಧೀಯೇ ಇರುತ್ತಿರಲಿಲ್ಲ. ಜೊತೆಗೆ ಭಾರತೀಯ ಜಾತಿ ವರ್ಣ ಸಮಾಜ ಸ್ವಲ್ಪವೂ ಅಲುಗಾಡದೆ ತಲೆ ಎತ್ತುವ ಅಸ್ಪೃಶ್ಯರ ಬಲಿ ತೆಗೆದುಕೊಳ್ಳವುದನ್ನೇ ಧರ್ಮವೆಂದುಕೊಳ್ಳುತ್ತಿತ್ತು. ಇದನ್ನೂ ನಾವು ಕಾಣಬೇಕು.

ಆದರೂ ಅಷ್ಟೊಂದು ಬೆಳವಣಿಗೆ ಒಂದೇ ಜೀವಿತದಲ್ಲಿ ಆಗುವ ಗಾಂಧೀಯು ವೃತ್ತಿ ಬಗ್ಗೆ ಮಾತ್ರ ಕೌಶಲ್ಯದ ಕಾರಣವಾಗಿ ವಂಶವೃತ್ತಿ ಹೇಳುತ್ತಿದ್ದುದನ್ನು ಕೊನೆಯವರೆಗೂ ಉಳಿಸಿಕೊಂಡರೇ ಹೇಗೆ ನನಗೆ ಗೊತ್ತಿಲ್ಲ. ಯಾವುದೇ ವೃತ್ತಿಯಾದರೂ ಜೀವನ ನಿರ್ವಹಣೆಗಾಗುವಷ್ಟು ಮಾತ್ರ ವೇತನ ಎಂಬ ಆಶಯ ಅವರಿಗಿದ್ದರೂ ಕೂಡ, ಅವರ ಈ ವಂಶವೃತ್ತಿ ಅಭಿಪ್ರಾಯವನ್ನು ಸಹಿಸಲು ಕಷ್ಟವಾಗುತ್ತದೆ. ಯಾಕೆಂದರೆ ವಂಶವೃತ್ತಿಯಲ್ಲಿ ಕೌಶಲ್ಯ ಹೆಚ್ಚಿದರೂ ಅದು ಯಾಂತ್ರಿಕವಾಗಿ ಕೊನೆಯಾಗುತ್ತದೆ. ಆದರೆ ವಂಶವೃತ್ತಿ ಬದಲಾವಣೆಯಲ್ಲಿ ಆ ವೃತ್ತಿಗೇನೆ ಸೃಜನಶೀಲತೆ ಉಂಟಾಗಿ ಹೊಸ ಸಾಧ್ಯತೆಗಳು ಹೆಚ್ಚುತ್ತವೆ. ಇದನ್ನು ಸದಾ ಚಲಿಸುವ ಗಾಂಧೀಗೆ ಮನದಟ್ಟು ಮಾಡಲು ನಾವು ಅವರೊಡನೆ ಒಂದು ಸಣ್ಣ ಜಗಳ ಮಾಡಬೇಕಾಗಿದೆ. ಅಥವಾ ವರ್ಗರಹಿತವಾದ ಜಾತಿರಹಿತವಾದ ಇಂಡಿಯಾ ನಿರ್ಮಿಸಲು ತಾನು ಪ್ರಯತ್ನಿಸುತ್ತಿರುವುದಾಗಿ ಗಾಂಧೀ ಹೇಳುತ್ತಾ ಭಾರತದಲ್ಲಿ ಒಂದೇ ಜಾತಿಯು ಉಳಿದಿರುವಂತಹ ಮತ್ತು ಬ್ರಾಹ್ಮಣರು ಹರಿಜನರನ್ನು ಸಹಜವಾಗಿ ಮದುವೆಯಾಗುವಂತಹ ಸಮಾಜಕ್ಕಾಗಿ ಗಾಂಧೀ ಹಂಬಲಿಸುತ್ತ ೧೯೪೬ ಒಂದು ನುಡಿ, ನುಡಿಯುತ್ತಾರೆ: 'ಅಸಮಾನತೆಯಿಂದ ಹಿಂಸೆಯು ಹುಟ್ಟಿಕೊಳ್ಳುತ್ತದೆ ಮತ್ತು ಸಮಾನತೆಯಿಂದ ಅಹಿಂಸೆಯು ಹುಟ್ಟಿಕೊಳ್ಳುತ್ತದೆ' ಎಂದು ಅಹಿಂಸೆ ಮತ್ತು ಸಮಾನತೆಯನ್ನು ಒಂದೇ ನಾಣ್ಯ ಮಾಡಿಬಿಡುತ್ತಾರೆ. ತನ್ನ ದರ್ಶನದ ಅಂತಿಮ ಸ್ಥಿತಿಯಲ್ಲಿ

'state withers away' ಎಂದು ಮಹಾವಾಕ್ಯ ನೀಡಿದ ಮಾರ್ಕ್ಸ್‌ನ ಕಾಣ್ಕೆಗೆ ಈ ನುಡಿ ಸಮಸಮವಾಗಿದೆ.

ಈ ಗಾಂಧೀ ಅಂಬೇಡ್ಕರ್ ಈರ್ವರೂ ಕೊನೆಕೊನೆಗೆ ತಲುಪಿದ ಸ್ಥಿತಿಯಲ್ಲಿ ಅವರನ್ನು ನೋಡಿದಾಗ ಅವರು ಇಂದು ಬದುಕಿದ್ದರೆ ಅವರು ಎಲ್ಲಿರುತ್ತಿದ್ದರು? ಹೇಗಿರುತ್ತಿದ್ದರು? ವೃದ್ಧಾಶ್ರಮವೊಂದಕ್ಕೆ ಎಸೆಯಲ್ಪಟ್ಟು ಒಂದೇ ಕಡೆ ವಾಸಿಸುತ್ತ ಅವರ ಗೊಣಗಾಟ ಇವರಿಗೆ ಮಾತ್ರ ಕೇಳಿಸುತ್ತಾ ಇವರ ಗೊಣಗಾಟ ಅವರಿಗೆ ಮಾತ್ರ ಕೇಳಿಸುತ್ತಾ ತಮ್ಮ ಕಣ್ಮುಂದೆ ಜರುಗಿತ್ತಿರುವುದನ್ನೆಲ್ಲಾ ಅಸಹಾಯಕರಾಗಿ, ತಲೆಮೇಲೆ ಕೈಯಿಟ್ಟು ಆಕಾಶ ನೋಡುತ್ತಿದ್ದರೆ? ಆಗಾಗ ಅವರಲ್ಲಿಗೆ ಹೋಗಿ ಚೇಷ್ಟೆ ಕೀಟಲೆ ಮಾಡುವ ಡಿ. ಆರ್. ನಾಗರಾಜ್ ಎಂಬ ಬಚ್ಚಾ ಹೇಳಿದ ಒಂದು ಮಾತು: 'ಹಳ್ಳಿಯ ಜೀವಂತ ಸಂದರ್ಭದೊಳಗೆ ಅಂಬೇಡ್ಕರ್‌ವಾದಿಯಾಗಿ ಹಾಗೂ ಅದರ ಹೊರಗೆ ಗಾಂಧಿವಾದಿಯಾಗಿ ಕಂಡರೆ ಅದು ಅಧಿಕ್ರತವಾದದ್ದು' ಎಂಬ ಆ ನುಡಿಯೊಳಗೆ ತಮಗೂ ತಿಳಿಯದಿದ್ದ ನಿಧಿ ಅಡಗಿದೆ ಎಂದು ಗಾಂಧಿ ಅಂಬೇಡ್ಕರಿಗೂ ಅನಿಸಿ ಆ ನಿಧಿಯ ಗೆಜ್ಜೆಸದ್ದು ಆಲಿಸಿ ಎಂದು ಈ ಇಬ್ಬರೂ ಕೂಗಿ ಹೇಳಿಯೂ ಕೂಡ. ಕೇಳಿಕೊಳ್ಳದ ಜನಸ್ತೋಮ ಕಂಡು ತಾವು ಸತ್ತವರ ನಡುವೆ ಬದುಕುತ್ತಿದ್ದೇವೇನೋ ಎಂದು ಅನ್ನಿಸಿ ದಿಕ್ಕು ಕಾಣದೆ ಆ ಈರ್ವರೂ ತಮ್ಮ ಸಾವಿಗಾಗಿ ಪ್ರಾರ್ಥನೆ ಮಾಡುತ್ತಿರುವಂತೆ ಗೋಚರಿಸುತ್ತಾರೆ.

ಈ ದೃಶ್ಯಾವಳಿ ನಮ್ಮ ಕಣ್ಮುಂದೆ ಬರಭಾರದು. ಅದಕ್ಕೆ ಬೇಕಾಗಿರುವುದು ಇಷ್ಟು: ನಾವು ಈ ಇಬ್ಬರ ಸಮಕಾಲೀನರಾದರೆ ಜಗಳ ಅನಿವಾರ್ಯ, ಅಲ್ಲಿ, ಇಲ್ಲಿ ಸ್ವಲ್ಪ ಸಮೀಪಕ್ಕೆ ಬರಬಹುದು. ಆದರೆ ಇಡಿಯಾಗಿ ನೋಡಿದರೆ ಅವರಿಬ್ಬರ ನಡುವಿನ ಜಗಳವೂ ಸರಸ ಆಗಲೂಬಹುದು. ಅವರಲ್ಲಿ ಯಾರೂ ಗಂಡು ಯಾರು ಹೆಣ್ಣು ಎಂದು ನಿರ್ಧರಿಸಲು ಅವರವರ ಭಾವಕ್ಕೆ ಬಿಡುವೆ. ಯಾಕೆಂದರೆ 'ಅಂಬೇಡ್ಕರ್ ತಾರತಮ್ಯಕ್ಕೆ ಒಳಗಾಗಿ ಮುನಿಸಿಕೊಂಡು ಹೊರಗೆ ಇರುವ ಮಗ' ಎಂದು ನಾನು ಹೇಳಿದ್ದರಲ್ಲಿ, ಮಗ ಎಂದರೆ ಹಕ್ಕಿರುವ ವಾರಸುದಾರ, ಆಗಿದ್ದಾನೆ ಎಂಬರ್ಥದಲ್ಲಿ ಗ್ರಹಿಸದೆ ಕೆಲವರು ಪದಪದಾರ್ಥ ಅರ್ಥಮಾಡಿಕೊಂಡುಬಿಟ್ಟರು! ಅದಕ್ಕಾಗಿ ಇಡನ್ನು ಅವರವರ ಭಾವಕ್ಕೆ ಬಿಡುವೆ. ಆದರೆ ನಾವು ಗೋರಿ ಅಗೆದು ಈ ಇಬ್ಬರ ಮೂಳೆಗಳನ್ನು ಎಣಿಸುತ್ತಾ, ಪೂಜಿಸುತ್ತಾ, ತರ್ಕಿಸುತ್ತಾ, ಭೇದ ಹುಡುಕುತ್ತಾ ಮಡಿಮಾಡಿ ಅವರು ಮಡಿಯುವಂತೆ ಮಾಡುತ್ತಿರುವುದನ್ನು ಕೈ ಬಿಡಬೇಕಾಗಿದೆ.

ಈಗ ಈ ಇಬ್ಬರನ್ನೂ ನಾವೂ ಜೊತೆಗೂಡಿಸಿ ಒಳಗೊಂಡರೆ, ಅವರು ಬಡಿದಾಡುತ್ತಿದ್ದ ಕಾಲಮಾನದಲ್ಲಿ ಕಪ್ಪುಬಣ್ಣವು ಕಪ್ಪು ಬಣ್ಣ ಮಾತ್ರವಾಗಿತ್ತು

.ಬಿಳಿಯ ಬಣ್ಣವು ಬಿಳಿಯ ಬಣ್ಣ ಮಾತ್ರವಾಗಿತ್ತು. ಇಂದು ಕಪ್ಪು ಬಣ್ಣದೊಳಗೇನೆ ಸಾವಿರಾರು ಬಣ್ಣ ಬಣಗಳಾಗಿಬಿಟ್ಟಿವೆ, ಬಿಳಿಯ ಬಣ್ಣದೊಳಗೂ ಸಾವಿರಾರು ಬಣ್ಣ ಬಣಗಳಿವೆ. ಬಣ್ಣ ಬಣಗಳಿಗೆ ತಕ್ಕಂತೆ ಸುಲಿಗೆಗಳೂ ಥರಾವರಿಗಳಾಗಿ ಆ ಸಂಖ್ಯೆಯೂ ವಿಪುಲವಾಗುತ್ತಿವೆ. ಜೊತೆಗೆ ಸುಲಿಗೆ ಇಂದು ಸುಲಿಗೆಯಾಗಿ ಸುಲಿಯುತ್ತಿಲ್ಲ, ರಕ್ಷಕನ ಮುಖವಾಡ ಹಾಕಿ ಸುಲಿಯುತ್ತಿದೆ. ಇದನ್ನು ಮಕ್ಕಳ ಮನರಂಜನಾ ಕಥೆಯಾಗಿಸಿ ಎಳೆಯ ಮಕ್ಕಳಲ್ಲೇ ಅಂದರೆ ಗಿಡವಾಗಿದ್ದಾಗಲೇ ಬಗ್ಗಿಸಿ ಸುಲಿಗೆಯನ್ನು ಒಪ್ಪಿತ ಮೌಲ್ಯವಾಗಿಸುವ ಹೊಸಹೊಸ ಬಲೆಗಳನ್ನು ಈ ಭೂಮಿ ಮೇಲೆ ನೇಯಲಾಗುತ್ತಿದೆ. ಗೆಳೆಯ ರಾಜೇಂದ್ರ ಚೆನ್ನಿ, ತಮ್ಮ 'ದಂತಗೋಪುರ ಮತ್ತು ಮಾರುಕಟ್ಟೆ ರಾಜಕೀಯ' ಲೇಖನದಲ್ಲಿ ಕಾಮಿಕ್ಸ್‌ಗಳಲ್ಲಿ ವಸಾಹತುಶಾಹಿ ಒಳಚರಿತ್ರೆಗಳಿವೆ ಎಂದು ಹೇಳುತ್ತಾ 'ಆದಿವಾಸಿಗಳ ಮೇಲೆ ಹುಕುಂ ಮಾಡುವ ಫ್ಯಾಂಟಮ್, ಆಫ್ರಿಕಾವನ್ನು ವಸಾಹತುವನ್ನಾಗಿ ಮಾಡಿದ ಬಿಳಿಯನ ಮೂಲವಾದರಿ ಎನ್ನುವುದನ್ನೂ, ಹಾಗೇ ನಿಸರ್ಗ ಮತ್ತು ಪ್ರಾಣಿಗಳ ಮೇಲೆ ರಮ್ಯವಾದ ರೀತಿಯಲ್ಲಿ ಆಳ್ವಿಕೆ ಮಾಡುವ ಟಾರ್ಜನ್, ನಿಸರ್ಗದ ಮೇಲೆ ದಾಳಿ ಮಾಡಿ ಅದನ್ನು ಬಳಸಿಕೊಳ್ಳುವ ಯೂರೋಪಿಯನ್ ಮನುಷ್ಯನ ಸಂಕೇತವೆನ್ನುವುದನ್ನು ಮರೆಯುತ್ತೇವೆ' ಎಂದು ಅಪೂರ್ವ ಒಳನೋಟ ನೀಡುತ್ತಾರೆ. ಹಾಗೇ ಚಿಂತಕ ಜೆರೆಮಿ ಸೀಬ್ರೂಕ್ ಬರೆಯುತ್ತಾ, 'ಜಗತ್ತಿನ ಕಾರ್ಮಿಕರೆಲ್ಲರೂ ಒಟ್ಟಾಗಿ ಜಗತ್ತನ್ನು ದಾಸ್ಯದಿಂದ ವಿಮುಕ್ತಗೊಳಿಸಬಲ್ಲರು' ಎಂಬ ಚಿಂತನೆ ದುರ್ಬಲಗೊಂಡಾಗ ಈಗ 'ನಮಗೆ ಬೇಕಿರುವುದೆಲ್ಲವನ್ನೂ ಬಂಡವಾಳಶಾಹಿಯ ಮೂಲಕ ಮಾತ್ರ ಪಡೆದುಕೊಳ್ಳುಲು ಸಾಧ್ಯ' ಎಂಬ ಪುರಾಣ ಸೃಷ್ಟಿಸಲಾಗಿದೆ ಎನ್ನುತ್ತಾರೆ.

ಇಂದು ಜೀವನ ಎಂದರೆ ಹಣದಿಂದ ಹಣಕ್ಕಾಗಿ ಹಣಕ್ಕೋಸ್ಕರ ಎಂಬಂತಾಗಿಬಿಟ್ಟಿದೆ. ಸಮಾನತೆ ಸಮತ್ವದ ಆಶಯಗಳು ಕಣ್ಣುಬಾಯಿ ಬಿಡುತ್ತಿವೆ. ಬಂಡವಾಳಶಾಹಿಯೇ ಇಂದು ಜಗತ್ತಿನ ಹಸಿವಿನ ಬಗ್ಗೆ ಮಾತಾಡುತ್ತಿದೆ, ಉದ್ಯೋಗದ ಬಗ್ಗೆ ಮಾತಾಡುತ್ತಿದೆ, ಬಡವರ ಉದ್ಧಾರ ತನ್ನ ಕೈಲಿ ಮಾತ್ರ ಎಂಬಂತೆ ಬಿಂಬಿಸಿಕೊಂಡು ನಂಬಿಸುತ್ತಿದೆ. ಮಾಟಮಂತ್ರ ಮಾಯಾಬಜಾರ್ ಎಲ್ಲವೂ ವಿಜ್ಞಾನದ ಭಾಷೆಯಲ್ಲಿ ಮಾತಾಡುತ್ತಿವೆ.

ಹೀಗಿರುವಾಗ ವಿಮೋಚನೆ ಹೇಗೆ? ಅಥವಾ ಯಾರು? ಖಳನಾಯಕನು ನಾಯಕನನ್ನು ತುಳಿದಿಟ್ಟು ತಾನೇ ನಾಯಕನ ಮಾತಗಳನ್ನಾಡುತ್ತಿದ್ದಾನೆ. ಜನ ಮರುಳಾಗುತ್ತಿದ್ದಾರೆ. ಜೊತೆಗೆ ಈ ಕಾಲ ಮಾಹಿತಿಯ ಯುಗ. ಮನುಷ್ಯ ಹೆಚ್ಚೆಚ್ಚು ಎಚ್ಚರವನ್ನೂ ಪಡೆಯುತ್ತಿದ್ದಾನೆ. ಎಚ್ಚರ ಇಲ್ಲದಿದ್ದಾಗ ಅಸಮಾನತೆ

ತಾರತಮ್ಯಗಳು ಇದ್ದರೂ ಹಿಂದೆ ಎಂಥದೋ ಜಡ ಜಡ್ಡು ನೆಮ್ಮದಿ ಇದ್ದರೆ ಇಂದು ಎಚ್ಚರದೊಡನೆ ತಾರತಮ್ಯ ಅಸಮಾನತೆಗಳು ಉಲ್ಬಣಗೊಂಡು ನೆಮ್ಮದಿಗೆಟ್ಟು ಭೂಮಿ ಬೇಯುತ್ತಿದೆ.

ಹೀಗಿದ್ದೂ ಸಮಾನತೆ ಸಮತ್ವದ ಕನಸನ್ನು ಸಾಕ್ಷಾತ್ಕರಿಸಬೇಕಾದ ಸಂಘಟನೆಗಳು, ಪಕ್ಷಗಳೂ ಒಟ್ಟಾಗುತ್ತಿಲ್ಲ. ತಂತಮ್ಮ ಸೈದ್ಧಾಂತಿಕತೆಗೆ ಅನುಗುಣವಾಗಿ ತಮ್ಮವೇ ಪ್ರತ್ಯೇಕ ಶತ್ರುಗಳನ್ನು ಗುರುತಿಸಿಕೊಂಡು ಆ ಶತ್ರುಗಳಿಗೆ ತಕ್ಕಂತೆ ತಮ್ಮ ಪ್ರತ್ಯೇಕತೆ ಆಚರಿಸುತ್ತಿವೆ. ಮಡಿ ಮಾಡ್ತಾರಲ್ಲ ಹಾಗೆ. ಕಾಲಾನುಕ್ರಮದಲ್ಲಿ ಜಡತೆ ಆವರಿಸಿಕೊಂಡಾಗ ಅವರು ಗುರುತಿಸಿಕೊಂಡಿದ್ದ ಶತ್ರು ಮರೆತು ಹೋಗಿ ಅವರ ಅಕ್ಕಪಕ್ಕದವರೇ ಶತ್ರುಗಳಾಗಿ ಬಿಡಬಹುದು. ಇದೂ ಆಗುತ್ತಿದೆ. ಹೀಗಿರುವಾಗ ತುಳಿತಕ್ಕೊಳಗಾದ ಜನತೆ ಒಟ್ಟಾಗುವುದೆಲ್ಲಿ ಬಂತು? ಇದರೊಡನೆ ಖಾಸಗಿ ಬಂಡವಾಳದ ಕೃಪಾಪೋಷಿತ ಕೆಲವು ಎನ್.ಜಿ.ಓಗಳು ಜನಪರಶಕ್ತಿಗಳಿಗಿಂತಲೂ ಹೆಚ್ಚು ಜನಪರವಾಗಿ ಮಾತಾಡುತ್ತ ಜನಪರ ಆಂದೋಲನಗಳಿಗೆ ತೊಡರುಗಾಲು ಹಾಕುತ್ತಿವೆ. ಜೊತೆಗೆ ಸಮತ್ವಸಮಾನತೆ ಆಶಯದ ದಲಿತ, ಮಹಿಳೆ, ಪರಿಸರ, ರೈತ ಮುಂತಾದ ಸಂಘಟನೆಗಳು, ಪಕ್ಷಗಳು ತಂತಮ್ಮ ಐಡೆಂಟಿಟಿ ರಾಜಕಾರಣವನ್ನೇ ಆನೆಕಾಲು ರೋಗದಂತೆ ದೊಡ್ಡದು ಮಾಡಿಕೊಂಡು ಸಮತ್ವ ಸಮಾನತೆಯನ್ನು ಮರೆತು ತೆವಳುತ್ತಿವೆ. ಇದುವರೆಗಿನ ಭೂಮಿ ಮೇಲಿನ ಶೋಷಣೆಯ ಇತಿಹಾಸದಲ್ಲಿ ಪ್ರಕೃತಿ ನಾಳಗೂ ಉಳಿಯುತ್ತಿತ್ತು. ಇಂದಿನ ಜಾಗತೀಕರಣ ಖಾಸಗೀಕರಣದ ದಾಹದಲ್ಲಿ ಪ್ರಕೃತಿ ನಾಳೆಗೆ ಉಳಿಯುವುದಿಲ್ಲವೇನೋ ಎಂಬಷ್ಟು ವೇಗವಾಗಿ ಧ್ವಂಸೀಕರಣ ನಡೆಯುತ್ತಿದೆ.

ಈ ಧ್ವಂಸೀಕರಣ ಯುಗದಲ್ಲಿ ಗಾಂಧೀ ಒಬ್ಬ ಸಾಕೇ? ಅಂಬೇಡ್ಕರ್ ಒಬ್ಬ ಸಾಕೇ? ಅಥವಾ ಈ ಇಬ್ಬರೂ ಜತೆಗೂಡಿದರೆ ಅದಷ್ಟೇ ಸಾಕೇ? ಸಾಲದು ಅನಿಸುತ್ತದೆ. ಲೋಹಿಯಾ? ಸಾಲದು ಅನಿಸುತ್ತದೆ. ಮಹರ್ಷಿ ಮಾರ್ಕ್ಸನನ್ನೂ ಜತೆಗೂಡಿಸಬೇಕಾಗಿದೆ. ಅಷ್ಟೂ ಸಾಲದು ಇನ್ನೂ. ತಮಗೆ ಬೇಕಾದ ಒಬ್ಬೊಬ್ಬರೇ ಸಾಕು ಎನ್ನುವವರು ಹೆಣದ ಮುಂದೆ ಎದೆ ಬಡೆದುಕೊಂಡು ಗೋಳಾಡುತ್ತಿರುವವರಂತೆ ಕಾಣಿಸುತ್ತಾರೆ. ಒಂದು ಸಲ ನಾವು ಕೊಡವಿಕೊಂಡು ಪೊರೆ ಕಳಚಿ ಮರುಹುಟ್ಟು ಪಡೆಯಬೇಕಾಗಿದೆ. ನಮಗ್ಗೆ ಬುದ್ಧ ವಚನಕಾರರ ಸ್ಪರ್ಶವೂ ಬೇಕಾಗಿದೆ.

ಸರ್ವೋದಯ ಆಂದೋಲನದ ಮರುಹುಟ್ಟಿನ ಸಾಧ್ಯತೆಗಳನ್ನು ಕುರಿತು...

– ಡಿ.ಎಸ್. ನಾಗಭೂಷಣ

(ವಾಸ್ತವಿಕ ನೆಲೆಯಲ್ಲಿ ಗಾಂಧೀ ವಿಚಾರಗಳು ಅನುಷ್ಠಾನದ ಸಾಮಾಜಿಕ – ರಾಜಕೀಯ ಸಾಧನವಾಗಿದೆ)

ಬಡವ–ಶ್ರೀಮಂತರೆನ್ನದೆ, ಕೀಳು–ಮೇಲುಗಳೆನ್ನದೆ, ಯಾರನ್ನೂ ಹೊರತುಪಡಿಸದೆ ಎಲ್ಲರ ಲೌಕಿಕ ಮತ್ತು ಅಧ್ಯಾತ್ಮಿಕ ಉನ್ನತಿಯನ್ನು ಗುರಿಯಾಗುಳ್ಳ 'ಸರ್ವೋದಯ' ಎಂಬುದು ಗಾಂಧಿ ದರ್ಶನದಲ್ಲಿನ ಒಂದು ಪ್ರತ್ಯೇಕ ಸಿದ್ಧಾಂತವಲ್ಲವೆಂಬುದನ್ನು ನಾವು ಮೊದಲು ತಿಳಿದಿರಬೇಕು. ಅದು ಗಾಂಧಿ ದರ್ಶನದ ವಾಸ್ತವಿಕ ನೆಲೆಯ ಅನುಷ್ಠಾನದ ಒಂದು ಸಾಮಾಜಿಕ–ರಾಜಕೀಯ ಸಾಧನವಾಗಿದೆ. ಸರ್ವೋದಯ ವಿಚಾರ ಗಾಂಧಿ ದರ್ಶನದ ಆಧಿ ಪಠ್ಯವೆನಿಸಿದ 'ಹಿಂದ್ ಸ್ವರಾಜ್'ನ ಮೂಲ ಪ್ರೇರಣೆಯೇ ಆಗಿದೆ ವೆಂಬುದನ್ನು ಗಮನಿಸಿದಾಗ ಅದು ಗಾಂಧಿವಾದದ ನಿಜವಾದ ಬೆನ್ನೆಲುಬೇ ಆಗಿದೆ ಎಂದು ಗೊತ್ತಾಗುತ್ತದೆ. ಹಾಗಾಗಿ ಇಂದು–ವಿಶೇಷವಾಗಿ, ಸರ್ವೋದಯ ಆಂದೋಲ್ಕನದ ಇನ್ನೊಂದು ರೂಪವೇ ಆಗಿದ್ದ ಜೆಪಿಯವರ 'ಸಂಪೂರ್ಣ ಕ್ರಾಂತಿ' ಆಂದೋಲನದ ಪ್ರಯತ್ನದ ನಂತರ– ಸರ್ವೋದಯ ಆಂದೋಲನ ಎಂಬುದು ಇಂದು ರಾಷ್ಟ್ರಾದ್ಯಂತವೂ ಬತ್ತಿ ಹೋಗಿರುವಂತೆ ಕಾಣುತ್ತಿದ್ದರೆ, ಅದಕ್ಕೆ ಕಾರಣ ಇಡಿಯಾಗಿ ಗಾಂಧಿ ವಿಚಾರಗಳ ಮೌಲಿಕತೆ ಮತ್ತು ಪ್ರಸ್ತುತತೆಗಳು ಹಿನ್ನೆಲೆಗೆ ಸರಿಯುವಂತಹ ರಾಜಕೀಯ ವಾತಾವರಣ ಸೃಷ್ಟಿಯಾಗಿರುವುದೇ ಆಗಿದೆ. ಈ ರೀತಿ ಏಕಾಯಿತು ಎಂಬುದರ ಪರಿಶೀಲನೆಯೇ 'ಸರ್ವೋದಯ' ಪರಿಕಲ್ಪನೆ ಮತ್ತು ಆಂದೋಲಮಗಳ ಇಂದಿನ ಅಗತ್ಯತೆಗಳ ವಿವೇಚನೆಯೂ ಆಗುತ್ತದೆ.

ಇಂದಿನ ಕಾಲಮಾನವನ್ನು ಜಾಗತೀಕರಣದ ಯುಗ ಎಂದು ಕರೆಯಲಾಗುತ್ತದೆ. ಜಾಗತೀಕರಣವೆಂದರೆ, ಪ್ರಜ್ಞೆಯ ನೆಲೆಯಲ್ಲಿ ಜಗತ್ತು ಒಂದು ಎಂಬ ಉದಾತ್ತ ಅರಿವಿನ ಅನಾವರಣವಾಗಿರದೆ, ಜಗತ್ತಿನ ವಿವಿಧ ಭಾಗಗಳಲ್ಲಿ ವಿವಿಧ ಕಾರಣ ಮತ್ತು ಉದ್ದೇಶಗಳಿಗಾಗಿ ಉತ್ಪಾದನೆಯಾಗುತ್ತಿರುವ ಎಲ್ಲ ಸರಕುಗಳಿಗೆ ಇಡೀ ಜಗತ್ತು ಒಂದು ಸಾಮಾನ್ಯ ಮಾರುಕಟ್ಟೆಯಾಗಲು ಇದ್ದ ಅಡೆ ತಡೆಗಳನ್ನು ಸಡಿಲಿಸಿ ಒಂದು ಮುಕ್ತ ವ್ಯಾಪಾರ ವಾತಾವರಣವನ್ನು ನಿರ್ಮಿಸುವುದೇ ಆಗಿದೆ ಎಂಬುದನ್ನು ನಾವು ಮೊದಲು ಅರಿಯಬೇಕಿದೆ. ಅಂದರೆ ಇದರ ಅರ್ಥ ಇಷ್ಟೆ: ಜಗತ್ತಿನ ಜನರ ಪ್ರದೇಶ ವಿಶಿಷ್ಟವಾದ ಬದುಕಿನ ಮಾದರಿಗಳಲ್ಲಿ ಅಡಕವಾಗಿದ್ದ ಸಂತೃಪ್ತಿಯ ವಿಶಿಷ್ಟತೆಗಳನ್ನು

ಕೀಳುಗರೆಯುತ್ತಾ ಮನುಷ್ಯನನ್ನು ತನ್ನ ಸಂಸ್ಕೃತಿ ವಿಶಿಷ್ಟ ಸಂತೃಪ್ತಿಯಿಂದ ಹೊರತಂದು ಅವನಲ್ಲಿ ಹೊಸ ಹೊಸ ಆಸೆಗಳನ್ನು ಹುಟ್ಟಿಸಿ ಅವನ ಮನಸ್ಸನ್ನು ಅಸ್ಥಿರಗೊಳಿಸುವುದೇ ಆಗಿದೆ. ಈ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಇದೂ ಇತಿಹಾಸದಲ್ಲಿ ಭಾರತದಂತಹ ದೇಶಗಳು ಗುಲಾಮಗಿರಿಗೆ ಈಡಾದ ಪ್ರಕ್ರಿಯೆ ಕುರಿತು ಗಾಂಧಿ ತಮ್ಮ 'ಹಿಂದ್ ಸ್ವರಾಜ್'ನಲ್ಲಿ ಮಂಡಿಸಿದ ಪರಿಶೀಲನೆಯ ಹೊಸ ರೂಪವೇ ಆಗಿದೆ ಎಂಬುದು ಗೊತ್ತಾಗುತ್ತದೆ. ಅಂದರೆ ಜಾಗತೀಕರಣವೆಂಬುದು ನವಸಾಮ್ರಾಜ್ಯಶಾಹಿಯೇ ಆಗಿದೆ.

ಆದರೆ ಇದು ನವಸಾಮ್ರಾಜ್ಯಶಾಹಿ ಎಂದು ಗುರುತಿಸಲು ನಮಗೆ ಇಂದು ಅಡ್ಡಿಯಾಗಿರುವ ಅಂಶವೆಂದರೆ, 'ಅಭಿವೃದ್ಧಿ' ಎಂಬ ಪರಿಕಲ್ಪನೆ. ಇದು ಯಾವಾಗಲೂ ಸದ್ಯದ ಮಾನವ ಸ್ಥಿತಿಯನ್ನು ಹೀನಾಯವೆಂದೇ ಪ್ರಸ್ತುತಪಡಿಸಿ, ಅದನ್ನು ಉತ್ತಮಗೊಳಿಸಿಕೊಳ್ಳುವುದು ಮಾನವನ ಆಜನ್ಮಸಿದ್ಧ ಹಕ್ಕೆಂದು ಪ್ರತಿಪಾದಿಸುತ್ತಾ ಮನುಷ್ಯನನ್ನು ಸದಾ ಅತೃಪ್ತನನ್ನಾಗಿಡುವ ಮಾನಸಿಕ ತಂತ್ರವನ್ನು ಅನುಸರಿಸುತ್ತದೆ. ಇದು ಈ ಹಿಂದೆ ಬ್ರಿಟಿಷ್ ವಸಾಹತುಶಾಹಿಯು ಒಂದು ಸುಯೋಜಿತ ಕಾರ್ಯಕ್ರಮವಾಗಿ ನಮ್ಮಲ್ಲಿ ಆರ್ಥಿಕ ಮತ್ತು ಸಾಮಾಜಿಕ ಹಿಂದುಳಿದಿರುವಿಕಯ ಮಾನಸಿಕತೆಯನ್ನು ಹುಟ್ಟಿಸಿ, ಮುಂದುವರೆಯುವಿಕೆ ಅಥವಾ ಪ್ರಗತಿ ಎಂಬ ಹೊಸ ಪರಿಕಲ್ಪನೆಯ ವ್ಯಾಮೋಹ ಹುಟ್ಟಿಸಿ ತನ್ನ ಸಾಮ್ರಾಜ್ಯಶಾಹಿಯನ್ನು ಸ್ಥಿರಗೊಳಿಸಿಕೊಂಡಿದ್ದರ ಇನ್ನೊಂದು–ಹೊಸ–ರೂಪವೇ ಆಗಿದೆ.

ಗಾಂಧಿ ಮನುಷ್ಯ ಇಂತಹ ಅತೃಪ್ತಿ–ವ್ಯಾಮೋಹಗಳ ಮಾನಸಿಕತೆ ಆತ್ಯಂತಿಕವಾಗಿ ಹೇಗೆ ಮನುಷ್ಯನ ಆತ್ಮವಿನಾಶಕ್ಕೆ, ಅಂದರೆ ಮನೋದೈಹಿಕ ಗುಲಾಮಗಿರಿಗೆ ಕಾರಣವಾಗುತ್ತದೆ ಎಂಬುದನ್ನು ವಿವರಿಸುತ್ತಾ, ಆತ್ಮದ ಇಂತಹ ಜಾರುವ ದಾರಿಗೆ ರಕ್ಷಣೆಯಾಗಿ ಅವರು 'ಸ್ವರಾಜ್ಯ'ದ ಪರಿಕಲ್ಪನೆಯನ್ನು ನೀಡಿದರು. ಆತ್ಯಂತಿಕವಾಗಿ ಮನುಷ್ಯನನ್ನೂ ಸರಕನ್ನಾಗಿ ಪರಿವರ್ತಿಸಬಲ್ಲ ಜಗತ್ತಿನ ವ್ಯಾಪರೀಕರಣದ ಇನ್ನೊಂದು ಹೆಸರೆನಿಸಿರುವ ಜಾಗತೀಕರಣವೆಂಬ ಜಾಗತಿಕ ಬಂಡವಾಳಶಾಹಿಯ ಹೊಸ ಯೋಜನೆಯ ವಿರುದ್ಧ, ಅಂದರೆ ಲಾಭಕೋರತನವೇ ಒಂದು ಸಿದ್ಧಾಂತವಾಗಿ ಇಂದು ಸೃಷ್ಟಿಸುತ್ತಿರುವ ಹಲವು ತೆರೆನ ಹಿಂಸೆ–ಅಶಾಂತಿ–ರೋಗ–ಆತ್ಮಹತ್ಯೆ ಇತ್ಯಾದಿ ದುರ್ಲಕ್ಷಣಗಳ ಬಾಧೆ ಇಲ್ಲದೆ ಮನುಷ್ಯ ತನ್ನ ಪ್ರದೇಶದ ಮತ್ತು ಸಮಾಜದ ಮಿತಿಗಳನ್ನು ಅರಿತು ನೆಮ್ಮದಿಯಿಂದ ಬದುಕುವ ಸಹಜ ಮಾರ್ಗವಿದು.

ಈ ಸಹಜ ಮಾರ್ಗದ ಹೊಳಹು ಗಾಂಧೀಜಿಗೆ ದೊರಕಿದ್ದು ೧೯೦೪ರಲ್ಲಿ ದ. ಆಫ್ರಿಕಾದಲ್ಲಿ ಅವರ ಗೆಳೆಯ ಹೆನ್ರಿ ಪೊಲಾಕ್ ನೀಡಿದ ಅಮೆರಿಕನ್ ಲೇಖಕ ಜಾನ್ ರಸ್ಕಿನ್ರ ಪುಸ್ತಕ 'ಅನ್‌ಟು ದ ಲಾಸ್ಟ್'(Unto the Last)ನಲ್ಲಿ. ಈ ಪುಸ್ತಕ ತಮ್ಮ

ಲೋಕ ಗ್ರಹಿಕೆಯ ವಿಧಾನವನ್ನೇ, ಆ ಮೂಲಕ ಮನುಷ್ಯ ಬದುಕಿನ ತಮ್ಮ ಕಲ್ಪನೆಯನ್ನೇ ಅಮೂಲಾಗ್ರವಾಗಿ ಬದಲಿಸಿತೆಂದು ಹೇಳುವ ಗಾಂಧಿ ಇದನ್ನು ೧೯೦೮ರ ಹೊತ್ತಿಗೆ 'ಸರ್ವೋದಯ' ಎಂಬ ಶೀರ್ಷಿಕೆಯಲ್ಲಿ ತಮ್ಮ ಮಾತೃಭಾಷೆ ಗುಜರಾತಿಗೆ ಅನುವಾದಿಸಿ ಆ ಪರಿಕಲ್ಪನೆಗೆ ಭಾರತೀಯ ಸಂದರ್ಭದ ಒಂದು ಹೊಸ ಅರ್ಥವನ್ನೇ ಪ್ರದಾನ ಮಾಡಿದರು. ಅದು ಸಾಧ್ಯವಾಗಿರುವುದು ಆ ಪುಸ್ತಕದಲ್ಲಿ ಪ್ರತಿಪಾದಿತವಾಗಿರುವ ೧) ವ್ಯಕ್ತಿಯ ಹಿತ ಸಮಾಜದ ಹಿತದಲ್ಲಿ ಅಡಗಿದೆ ೨) ವಕೀಲ ಮತ್ತ ಚಮ್ಮಾರ ಇಬ್ಬರೂ ತಮ್ಮ ಜೀವನೋಪಾಯಕ್ಕಾಗಿ ದುಡಿಯುತ್ತಿದ್ದು ಅವರ ಆ ಹಕ್ಕುಗಳು ಸಮಾನವಾದುದರಿಂದ ಅವರಿಬ್ಬರ ಕೆಲಸದ ಮೌಲಿಕತೆಗಳೂ ಸಮಾನವಾದವು ಮತ್ತು ೩) ರೈತ ಮತ್ತು ಕುಶಲಕರ್ಮಿಗಳಂತಹವರ ದೈಹಿಕ ದುಡಿಮೆಯ ಬದುಕೇ ಬದುಕಲು ನಿಜವಾಗಿ ಅರ್ಹವಾದ ಬದುಕಾಗಿದೆ ಎಂಬ ಮೂರು ಮುಖ್ಯ ತತ್ವಗಳನ್ನು ಕುರಿತ ಆಳವಾದ ಒಳನೋಟಗಳಲ್ಲಿ. ಇದು ಕೈಗಾರಿಕೀಕರಣ, ಯಾಂತ್ರೀಕರಣಗಳನ್ನು ಮನುಷ್ಯನ ನಿಜವಾದ ಪ್ರಗತಿಯ ಸಂಕೇತಗಳೆಂದು ನಂಬಿಸಿ ಅದರ ಆಕರ್ಷಣೆಯಲ್ಲಿ ಸಾಮ್ರಾಜ್ಯಶಾಹಿಯನ್ನು ಸಹಜವೆಂಬಂತೆ ಸೃಷ್ಟಿಸಿದ ಪಶ್ಚಿಮದ ಆಧುನಿಕ ನಾಗರೀಕತೆಯ ದುಷ್ಟ ಲಕ್ಷಣಗಳ ಆಳವಾದ ಪರಿಶೀಲನೆಗೆ ಗಾಂಧಿಯನ್ನು ಪ್ರೇರೇಪಿಸಿತು. ಇದಕ್ಕೆ ಗಾಂಧೀಜಿಗೆ ತಾತ್ವಿಕ ಸ್ಫೂರ್ತಿ ಒದಗಿದ್ದು ಓರ್ವ ಪಶ್ಚಿಮದ ದಾರ್ಶನಿಕನಿಂದಲೇ ಎಂಬುದು ಇಲ್ಲಿ ಗಮನಾರ್ಹ ಮತ್ತು ತಾರ್ಕಿಕವಾಗಿ ಸರಿಯಾಗಿಯೇ ಇದೆ.

ಅದೇನೇ ಇರಲಿ, ಇಂದಿನ ಜಾಗತೀಕರಣ ಮತ್ತೇನೂ ಆಗಿರದೆ, ಗಾಂಧಿ ಇಂತಹ ತಮ್ಮ ಆಳದ ಪರಿಶೀಲನೆಯ ಹಿನ್ನೆಲೆಯಲ್ಲಿ ಯಾವುದನ್ನು 'ಇದು ನಾಗರೀಕತೆಯಲ್ಲ; ರೋಗ' ಎಂದು ಕರೆದರೋ ಆ ಆಧುನಿಕ ನಾಗರೀಕತೆಯ ಆತ್ಯಂತಿಕ ರೂಪವೇ ಆಗಿದೆ. ಹಾಗಾಗಿ ಇಂದು 'ಸರ್ವೋದಯ'ದ ಅಗತ್ಯವಿರುವುದು ಅದು ಜಾಗತೀಕರಣದ ದುಷ್ಫಲಗಳ ವಿರುದ್ಧ ಹೋರಾಡಲು ನಮಗೆ ಲಭ್ಯವಿರುವ ಸಹಜ ಬದುಕಿನ ಮಾದರಿಯ ಸ್ಫೂರ್ತಿ ಸೆಲೆಯಾಗಿ. ಆದರೆ ಅದಕ್ಕೆ ಮೊದಲು ಸರ್ವೋದಯ ಮಾಡಬೇಕಾದ ಒಂದು ಪೂರಕ ಕೆಲಸವೆಂದರೆ, ಪಶ್ಚಿಮದ ಆಧುನಿಕ ನಾಗರೀಕತೆಯ ಇತ್ತೀಚಿನ ರೂಪವಾದ ಈ ಜಾಗತೀಕರಣವನ್ನು ಒಂದು ರೋಗವೆಂದು ಜನರಿಗೆ ಮನವರಿಕೆ ಮಾಡುವುದು. ಇದಕ್ಕಾಗಿ 'ಸರ್ವೋದಯ'ವು ಜಾಗತೀಕರಣದ ವಿರುದ್ಧ ಈಗ ನಡೆದಿರುವ ಅನೇಕ ರೀತಿಯ ಆಂದೋಲನಗಳ ಜೊತೆ ಕೈಜೋಡಿಸಬೇಕಿದೆ. ತನ್ನ ವಿಶಿಷ್ಟ ವಿಚಾರಧಾರೆಯ ಗುರುತನ್ನು ಕಳೆದುಕೊಳ್ಳದೆ ಇತರ ಹೋರಾಟಗಳನ್ನು ತನ್ನ ಸತ್ವದ ಶಕ್ತಿಯಿಂದ ಪ್ರಭಾವಿಸುವ ಕೆಲಸ ಮಾಡಬೇಕಿದೆ. ಏಕೆಂದರೆ ಈ ಬಹಳಷ್ಟು ಇತರ ಹೋರಾಟಗಳು ಆಧುನಿಕ ನಾಗರೀಕತೆಯ ರಾಜಕೀಯ ಉತ್ಪನ್ನಗಳೇ ಆಗಿವೆ. ಉದಾಹರಣೆಗೆ, ಅವು ಮನುಷ್ಯನನ್ನು ಹೆಚ್ಚೆಚ್ಚು

ಸುಖಜೀವಿಯನ್ನಾಗಿಸುವ ಆದರ್ಶ ಹೊಂದಿವೆ. ಅದಕ್ಕಾಗಿ ಅವು ಆಧುನಿಕ ತಂತ್ರಜ್ಞಾನದ ಅವಿಮರ್ಶಕ ಬೆಂಬಲಿಗರಾಗಿವೆ ಮತ್ತು ಇದಕ್ಕೆಲ್ಲ ಸಂಸದೀಯ ಪ್ರಜಾಪ್ರಭುತ್ವ ಮಾರ್ಗವೇ ಶ್ರೇಷ್ಠವೆಂದು ನಂಬಿವೆ. ಆದರೆ ಸರ್ವೋದಯ ಹಾಗೆ ಭಾವಿಸದ; ಮೂಲತಃ ಒಂದು ಅಧ್ಯಾತ್ಮಿಕ ಮೌಲ್ಯ ಪ್ರೇರಿತ ಆಂದೋಲನವಾಗಿದೆ ಎಂಬ ಸತ್ಯ ಅದಕ್ಕೆ ಸದಾ ನೆನಪಿನಲ್ಲಿರಬೇಕಿದೆ.

ಏಕೆಂದರೆ ಸರ್ವೋದಯವೂ ಸೇರಿದಂತೆ, ಗಾಂಧಿಯ ಇಡೀ ಜೀವನ ದರ್ಶನ, ಮನುಷ್ಯನ ಬದುಕಿನ ಮೂಲ ಉದ್ದೇಶ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದೇ ಆಗಿದೆಂಬ ನಂಬಿಕೆಯನ್ನು ಆಧರಿಸಿದ್ದಾಗಿದೆ. ಹಾಗೇ ಆ ಭಗವಂತನ ಸಾಕ್ಷಾತ್ಕಾರಕ್ಕಾಗಿ ಅದು ಧ್ಯಾನ–ತಪಸ್ಸುಗಳನ್ನು ನಂಬಿರದೆ, ಭಗವಂತ ನಮ್ಮ ಕಣ್ಣಿಗೆ ಕಾಣುವಂತಿರುವುದು ಅವನ ಸೃಷ್ಟಿಯ ರೂಪದಲ್ಲಿ ಮತ್ತು ಆ ಸೃಷ್ಟಿಯ ಸಂರಕ್ಷಣೆಯ ಕೆಲಸವೇ ನಿಜವಾದ ಭಗವಂತನ ಸಾಕ್ಷಾತ್ಕಾರದ ಕೆಲಸವಾಗಿರುತ್ತದೆ ಎಂದು ನಂಬಿದೆ. ಸೃಷ್ಟಿಯ ಸಂರಕ್ಷಣೆ ಎಂದರೆ, ಮಾನವ ಘನತೆಗೇ ಅವಮಾನದಂತೆ ಕಾಣುವ ದೀನ ದಲಿತರ ಸೇವೆಯ ಮೂಲಕ ಅವರ ಉನ್ನತೀಕರಣ. ಜೊತೆಗೆ ಅಷ್ಟೇ ಮುಖ್ಯವಾಗಿ ಆಧುನಿಕ ನಾಗರೀಕತೆಯ 'ಅಭಿವೃದ್ಧಿ'ಯ ಹಪಾಹಪಿಯಿಂದಾಗಿ ನಾಶವಾಗುತ್ತಿರುವ ನಿಸರ್ಗದ ಸಂರಕ್ಷಣೆ. ಗಾಂಧಿ, ಧರ್ಮ ಎಂದರೆ ಕರ್ತವ್ಯ; ಕರ್ತವ್ಯ ಎಂದರೆ ನೆರೆಹೊರೆಯ ಜವಾಬ್ದಾರಿ ಎಂದು ವ್ಯಾಖ್ಯಾನಿಸಿದ್ದನ್ನೂ ನಾವಿಲ್ಲಿ ನೆನಪಿಸಿಕೊಳ್ಳಬೇಕಿದೆ. ಇಲ್ಲಿ ಅವರು 'ಸರ್ವೋದಯ ಆರಂಭವಾಗಬೇಕಿರುವುದು ಅಂತ್ಯೋದಯದಿಂದ' ಎಂದೂ ಹೇಳುತ್ತಿದ್ದರು ಎಂಬುದನ್ನೂ ಇಲ್ಲಿ ನೆನಪಿಸಿಕೊಂಡರೆ, ಅವರ ನೆರೆಹೊರೆಯ ಕಲ್ಪನೆಯೂ ಸ್ಪಷ್ಟವಾಗುತ್ತದೆ.

ಇದರ ಜೊತೆಗೇ, 'ಈ ಭೂಮಿ ಎಲ್ಲರ ಅಗತ್ಯಗಳನ್ನು ಪೂರೈಸಬಲ್ಲುದೇ ಹೊರತು ಎಲ್ಲರ ಆಸೆಗಳನ್ನಲ್ಲ' ಎಂಬ ಅವರ ಮಾತು–ಪರಿಸರ ಪ್ರಜ್ಞೆ, ವಾದ, ವಿಜ್ಞಾನ, ಆಂದೋಲನ ಇತ್ಯಾದಿಗಳ ಸುಳಿವು ಕೂಡ ಇಲ್ಲದ ಕಾಲದಲ್ಲಿಯೇ ಮನಗಂಡಿದ್ದ ಪ್ರವಾದಿತ್ವ ಸಮಾನವಾದಸತ್ಯ– ಇಂತಹ 'ಸರ್ವೋದಯ'ವು ಆಗಬೇಕಾದದ್ದು ಎಂತಹ ಮಿತಿಗಳ ಚೌಕಟ್ಟಿನಲ್ಲಿ ಎಂಬುದನ್ನೂ ಸೂಚಿಸುತ್ತದೆ. ಇಂತಹ ಮಿತಿಗಳ ಸ್ಪಷ್ಟ ಕಲ್ಪನೆ ನಿಜವಾಗಿ ಅರಿವಾಗುವುದು ಮತ್ತು ಅದನ್ನು ಪಾಲಿಸಲು ಸಾಧ್ಯವಾಗುವುದು ನಮ್ಮ ಹತ್ತಿರದ್ದೇ ಎನಿಸುವ 'ಸರ್ಕಾರವಲ್ಲದ ಸರ್ಕಾರ'ದಂತಿರಬಲ್ಲ ಸ್ವಾಯತ್ತ ಸ್ಥಳೀಯ ಆಡಳಿತ ವ್ಯವಸ್ಥೆಯಲ್ಲಿ. ಇದನ್ನು ಗಾಂಧಿ 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರಾದರೂ, ಇಂದು ಗ್ರಾಮಗಳು ಗ್ರಾಮಗಳಾಗಿ ಉಳಿಯದಿರುವುದರಿಂದಿ ಈಗ 'ಪರಿಸರ ಸರ್ಕಾರ'ಗಳ ಕಲ್ಪನೆಯನ್ನು ಪರಿಚಯಿಸುವ ಪ್ರಯತ್ನ ಮಾಡಿ, 'ಸರ್ವೋದಯ'ವು ಅಂತಹ 'ಪರಿಸರ ಸ್ವರಾಜ್ಯ'ದ ಪರಿಕಲ್ಪನೆಯನ್ನು ಪ್ರತಿಪಾದಿಸಬೇಕಿದೆ. ಇಂತಹ 'ಪರಿಸರ ಸ್ವರಾಜ್ಯ'ದ ಶಿಕ್ಷಣ, ಅಭಿವೃದ್ಧಿ ಮತ್ತು ಆಡಳಿತ ನೀತಿಗಳು

ಎಂತಹವಾಗಿರುತ್ತದೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ.

ಹಲವರಿಗೆ ತೀರಾ ಆದರ್ಶಮಯ ಮತ್ತು ಅವಾಸ್ತವಿಕವೆನಿಸುವ ಇಂತಹ ಕೆಲಸಗಳಿಗೆ ಕೈಹಾಕುವುದರಿಂದ ಸರ್ವೋದಯವು ಕಳೆದುಕೊಳ್ಳಲು ಇಂದು ಅದರ ಬಳಿ ಏನೂ ಉಳಿದಿಲ್ಲ. ಗಾಂಧಿ ಪ್ರಣೀತ ತನ್ನ ತತ್ವದ ಹೊರತಾಗಿ. ಈ ತತ್ವದ ಬಗ್ಗೆ ಅದಕ್ಕೆ ನಿಜವಾದ ನಂಬಿಕೆ ಇದ್ದರೆ ಅದನ್ನು ಉಳಿಸಿಕೊಳ್ಳಲಾದರೂ ಅದೀಗ ಸನ್ನದ್ಧವಾಗಬೇಕಿದೆ. ಹಲವರಿಗೆ ತೀರಾ ಅದರ್ಶಮಯ ಮತ್ತು ಅವಾಸ್ತವಿಕವೆನ್ನಿಸುವ ಗುರಿಗಳ ಬೆನ್ನು ಹತ್ತಿದವರಿಂದಲೇ ಜಗತ್ತಿನ ಇತಿಹಾಸದಲ್ಲಿ ನಿಜವಾದ ಬದಲಾವಣೆಗಳು ಸಂಭವಿಸಿರುವುದು ಎಂಬುದೂ ಈ ಹೊತ್ತಿನಲ್ಲಿ ನೆನಪಿರಬೇಕಿದೆ. ಹಾಗೇ ಇಂದು ಸರ್ವೋದಯ ಆಂದೋಲನದ ಬಳಿ ಇಡೀ ರಾಷ್ಟ್ರದಲ್ಲಿ ಹೆಸರು ಹೇಳಲು ಒಂದೆರೆಡು ಆಶ್ರಮಗಳು ಮತ್ತು ನಾಲ್ಕಾರು ಹಿರಿಯ ನಾಯಕರ ಹೊರತಾಗಿ ಏನೂ ಉಳಿಯದಂತಾಗಿರಲು ಏನು ಕಾರಣವೆಂದು ಅದು ತನ್ನ ಬಿಂಕ ಬಿಟ್ಟು ಯೋಚಿಸಬೇಕಿದೆ.

ವಿನೋಬಾರಂತಹ ಗಾಂಧಿ ಆಶೀರ್ವಾದ ಪಡೆದ ನಾಯಕ ರಾಷ್ಟ್ರಾದ್ಯಂತ ತಿರುಗಿ ಸಾವಿರಾರು ಎಕರೆ ಭೂಮಿಯನ್ನು ದಾನ ಪಡೆದ ಐತಿಹಾಸಿಕ ಕಾರ್ಯಕ್ರಮದ ಮತ್ತು ಇದರ ಭಾಗವಾಗಿ ಜಯಪ್ರಕಾಶ್ ನಾರಾಯಣರಂತಹ ನಿಸ್ಪೃಹ ಜನನಾಯಕನನ್ನು ತನ್ನೆಡೆಗೆ ಆಕರ್ಷಿಸಿದ್ದರ ಹೊರತಾಗಿಯೂ 'ಸರ್ವೋದಯ'ವೆಂಬುದು ಏಕೆ ಈಗ ಜನರ ಮಧ್ಯೆ ಚಲಾವಣೆ ಕಳೆದುಕೊಂಡಿರುವ ನಾಣ್ಯವಾಗಿದೆ ಎಂಬುದರ ಬಗ್ಗೆ ಈಗ ಉಳಿದಿರುವ ನಾಯಕರ ಮಧ್ಯೆಯಾದರೂ ಬಿಚ್ಚು ಮನಸ್ಸಿನ ಪರ್ಯಾಲೋಚನೆ ನಡೆಯಬೇಕಿದೆ. ಅದಕ್ಕಾಗಿ ಅವರು ಸಮಾನ ಮನಸ್ಕ ಆಂದೋಲನಗಳ ನಾಯಕರ ಜೊತೆ ಬೆರೆತು ಚರ್ಚಿಸುವ ಕಾಲ ಸನ್ನಿಹಿತವಾಗಿದೆ. ಅದಕ್ಕಾಗಿ ಅದು ತನ್ನ ಪಾರಂಪರಿಕ ಮಡಿ–ಮೈಲಿಗೆಗಳನ್ನು ತೊರೆದು ಜಾಗತೀಕರಣಗೊಂಡ ಸಮಾಜದ ಹೊಸ ಸೂಕ್ಷ್ಮಗಳನ್ನು ಅರಿತು, ಅದಕ್ಕೆ ತಕ್ಕಂತೆ ತನ್ನ ಗುರಿ–ಆದರ್ಶಗಳನ್ನು ಮರುರೂಪಿಸಿಕೊಳ್ಳುವ ಧೈರ್ಯ ತೋರಬೇಕಿದೆ. ಅದಕ್ಕೆ, ತನ್ನ ಹೆಗಲ ಮೇಲಿನ ಕೆಲವು ಹಳೆಯ ಹೊರೆಗಳನ್ನು ಇಳಿಸಿಕೊಳ್ಳಲು ಬೇಕಾದ 'ತ್ಯಾಗ'ದ ಅಗತ್ಯವೂ ಇದೆ. ವಿನೋಬಾಜಿ ಬಹುವಾಗಿ ಹೇಳುತ್ತಿದ್ದ 'ತ್ಯಾಗ'ಗಗಳಲ್ಲಿ ಇದೂ ಒಂದು ಒಂದು 'ಸರ್ವೋದಯ' ಭಾವಿಸಿ, ಅದು ಎಪ್ಪತ್ತರ ದಶಕದಲ್ಲಿ ಜೆಪಿಯವರ ನೇತೃತ್ವದಲ್ಲಿ ನಡೆದಂತಹ ರಾಜನೀತಿ–ಲೋಕನೀತಿಗಳ ಸಕಾರಾತ್ಮಕ ಮಿಲನದ ಪ್ರಯತ್ನಕ್ಕೆ ತನ್ನ ಅಮೂಲ್ಯ ಕೊಡುಗೆ ಸಲ್ಲಿಸುವುದಾದರೆ, ಅದು ಮತ್ತೆ ಸೃಜನಶೀಲವಾಗಲು ತಯಾರಾದಂತೆಯೇ ಸರಿ.

ಈಗ ಮೇಲುಕೋಟೆಯಲ್ಲಿ ಆಯೋಜಿಸಲಾಗುತ್ತಿರುವ 'ರಾಜ್ಯ ಮಟ್ಟದ ಸರ್ವೋದಯ ಸಮ್ಮೇಳನ' ಇಂತಹ ಒಂದು ಪ್ರಯತ್ನಕ್ಕೆ ನಾಂದಿ ಹಾಡಲಿ ಎಂದು ಆಶಿಸುತ್ತೇನೆ.

ಸರ್ವೋದಯ ಸಮಾಜ ರಚನೆಗಾಗಿ ಕಷ್ಟಗಳನ್ನು ಮೆಟ್ಟಿ ನಿಲ್ಲೋಣ

– ಡಾ|| ಜಗದೀಶ್ ಪೈ

(ಸರ್ವೋದಯ ಸಮಾಜ ರಚನೆ ಕಷ್ಟಕರವಾದುದು ಹೌದು; ಸುಲಭಕರವೂ ಹೌದು ಒಳ್ಳೆಯ ಕೆಲಸ ಮಾಡುವಾಗ ಬರುವ ಕಷ್ಟಗಳನ್ನು ಎದುರಿಸುವುದಕ್ಕೆ ಬೇಕಾದ ಸ್ಥೈರ್ಯವನ್ನು ಈ ಲೇಖನ ನೀಡುತ್ತದೆ.)

ಯಾವನೇ ಒಬ್ಬ ಯಶಸ್ವೀ ವ್ಯಕ್ತಿಯ ಹಿಂದೆ ಕಷ್ಟ-ಕಾರ್ಪಣ್ಯಗಳ, ಸೋಲು-ಸವಾಲುಗಳ ವ್ಯಥೆ ಇರುತ್ತದೆ. ಯಶಸ್ಸಿಗಾಗಿ ಕಷ್ಟಗಳನ್ನು ಎದುರಿಸುತ್ತಿರುವಾಗ ಆತನನ್ನು ಯಾರೂ ಗಮನಿಸಿರುವುದಿಲ್ಲ, ಸಹಕರಿಸುವುದೂ ಇಲ್ಲ. ಅದೇ ವ್ಯಕ್ತಿ ಕಷ್ಟವನ್ನು ಎದುರಿಸಿ ನಿವಾರಿಸಿ ಯಶಸ್ಸು ಗಳಿಸಿದಾಗ ಆತನನ್ನು ಸಮಾಜ ಗುರುತಿಸುತ್ತದೆ, ಗೌರವಿಸುತ್ತದೆ, ಹೀಗೆ ಗೌರವಕ್ಕೆ ಯಶಸೇ ಮಾನದಂಡ.

ಯಶಸ್ಸನ್ನು ರಾತ್ರಿ-ಬೆಳಗಾಗುವುದರಲ್ಲಿ ಪಡೆಯಲಾಗುವುದಿಲ್ಲ. ಅದು ಕಲ್ಲು-ಮುಳ್ಳುಗಳಿರುವ ಸುದೀರ್ಘವಾದ ಪಯಣ. ಇಂತಹ ದುರ್ಗಮ ದಾರಿಯಿಂದ ನಿರ್ಗಮಿಸುವವರೇ ಅಧಿಕ. ಕೆಲವೇ ಜನ ಮಾತ್ರ ಧೈರ್ಯ-ಸ್ಥೈರ್ಯದಿಂದ ನಡೆದು ಕೊನೆಗೆ ಯಶಸ್ಸನ್ನು ಗಳಿಸುತ್ತಾರೆ. ಯಾರು ಕಷ್ಟವನ್ನು ಸಹಿಸಲು, ಎದುರಿಸಲು ತಯಾರಿಲ್ಲವೋ ಅವರಿಗೆ ಯಶಸ್ಸು ಎಂಬುದೊಂದು ಕನಸಿನ ಗಂಟು. ಯಶಸ್ಸಿನ ಭವ್ಯ ಸೌಧಕ್ಕೆ ಕಷ್ಟಗಳೇ ಭದ್ರಬುನಾದಿ.

ನಮಗೆ ಗೋಪುರದ ಶಿಖರ ಮಾತ್ರ ಕಂಡುಬರುತ್ತದೆ. ಆದರೆ ಅದನ್ನು ಭದ್ರವಾಗಿ ಹಿಡಿದಿಟ್ಟ ಬುನಾದಿ ಕಾಣುವುದೇ ಇಲ್ಲ. ಅದೇ ರೀತಿ ಮನುಷ್ಯನ ಯಶಸ್ಸು ಮಾತ್ರ ಕಾಣುತ್ತದೆಯೇ ವಿನಾ ಅದರ ಹಿಂದೆ ಆತ ಪಟ್ಟಿರುವ ಕಷ್ಟಗಳ ಸರಣಿ ಕಂಡುಬರುವುದೇ ಇಲ್ಲ. ಹಿಮಾಲಯದ ತುತ್ತತುದಿಗೇರಿದಾಗಲೇ ಆ ವ್ಯಕ್ತಿಯ ಬಗ್ಗೆ ಜನ ಗಮನಿಸುತ್ತಾರೆ.

ಹಿಮಾಲಯವನ್ನು ಏರುವಾಗ ಹಲವುಬಾರಿ ಬಿದ್ದ, ಜಾರಿ, ಸೋತ ಸಂಗತಿಯನ್ನು ಯಾರೂ ಗುರುತಿಸುವುದಿಲ್ಲ. ತೇನ್‌ಸಿಂಗ್ ಹಿಮಾಲಯವನ್ನು ಮೊಟ್ಟಮೊದಲಬಾರಿಗೆ ಏರಿದಾಗ ಜಗತ್ತೆಲ್ಲಾ ದಿಗ್ಭ್ರಮೆಗೊಂಡಿತು. ಆದರೆ ತೇನ್‌ಸಿಂಗ್ ಒಮ್ಮೆಲೆ ಹಿಮಾಲಯವನ್ನು ಹತ್ತಲಿಲ್ಲ. ಅದಕ್ಕೆ ಸುದೀರ್ಘ ಕಾಲದಿಂದ ತಯಾರಿ ನಡೆಸಿದ್ದ, ಪ್ರಯತ್ನ ಪಟ್ಟಿದ್ದ. ಹಿಮಾಲಯವನ್ನು ಹತ್ತುವಾಗ ಆತ ಎರಡು ಬಾರಿ

ವಿಫಲನೂ ಆಗಿದ್ದ. ಆದರೆ ತನ್ನ ಸೋಲನ್ನೇ ಸವಾಲಾಗಿ ಸ್ವೀಕರಿಸಿ ಮೂರನೆಯ ಬಾರಿ ಪ್ರಯತ್ನಿಸಿದಾಗ ಆತ ಹಿಮಾಲಯದ ನೆತ್ತಿಯನ್ನು ತಲಪುವುದರಲ್ಲಿ ಯಶಸ್ವಿಯಾದ.

ಶಾಲೆಯ ಒಂದು ತರಗತಿಯಲ್ಲಿ ನೂರಾರು ವಿದ್ಯಾರ್ಥಿಗಳಿರುತ್ತಾರೆ. ಅವರೆಲ್ಲರಿಗೂ ಭಗವಂತ ದಿನಕ್ಕೆ ೨೪ ಗಂಟೆ ಸಮಾನವಾಗಿ ಕೊಟ್ಟಿರುತ್ತಾನೆ. ಅವರೆಲ್ಲರಿಗೂ ಅಧ್ಯಾಪಕರು ಸಮಾನವಾಗಿ ಪಾಠ ಹೇಳಿಕೊಡುತ್ತಾರೆ.ಎಲ್ಲರಿಗೂ ಕಲಿಯಲು ವಿಷಯಗಳು ಒಂದೇ ಪರೀಕ್ಷೆಯಲ್ಲಿಯೂ ಪ್ರಶ್ನೆಪತ್ರಿಕೆಯಲ್ಲಿಯೂ ವ್ಯತ್ಯಾಸವಿಲ್ಲ. ಆದರೆ ಕೆಲವರು ಹೆಚ್ಚು ಅಂಕ ಗಳಿಸಿ ಮುಂದಿನ ಜೀವನದಲ್ಲಿ ಯಶಸ್ವೀ ವ್ಯಕ್ತಿಗಳಾಗುತ್ತಾರೆ ಯಾಕೆ? ಇದಕ್ಕೆ ಉತ್ತರ ಬಹಳ ಸರಳ. ಯಶಸ್ವೀ ವ್ಯಕ್ತಿಗಳು ನಿದ್ರೆಗೆಟ್ಟು ತುಂಬ ಕಷ್ಟಪಟ್ಟು ಓದುತ್ತಾರೆ. ಓದುವಾಗ ಲೌಕಿಕ ಆಕರ್ಷಣೆಗಳಿಗೆ ಒಳಗಾಗದ ಹಾಗೆ ಜಾಗ್ರತೆವಹಿಸುತ್ತಾರೆ. ಒಂದೇ ಶಾಲೆಯಲ್ಲಿ ಓದಿದರೂ, ಒಂದೇ ಅಧ್ಯಾಪಕರ ಅಡಿಯಲ್ಲಿ ಕಲಿತರೂ ಯಶಸ್ಸು-ಸಾಧನೆಗಳಲ್ಲಿ ಎಷ್ಟೊಂದು ವ್ಯತ್ಯಾಸ!

ಚಾಣದ ಪೆಟ್ಟು

ಅಧ್ಯಾಪಕರು, ಕನ್ನಡದ ಒಂದು ಪದ್ಯವನ್ನು ವಿವರಿಸುತ್ತಿದ್ದರು:

ಶಿಲ್ಪಿಯ ಚಾಣದ ಹೊಡೆತವ ಸಹಿಸದ
ಕಲ್ಲದು ದೇವರ ರೂಪಾಯ್ತು।
ಪೆಟ್ಟಿಗೆ ಅಂಜಿದ ಕಟ್ಟೆಯ ಕಲ್ಲಿಗೆ
ದೇವರ ಪಟ್ಟವು ದೂರಾಯ್ತು॥

ಒಂದು ದೇವಾಲಯದಲ್ಲಿ ಸುಂದರವಾದ ಕಲ್ಲಿನ ವಿಗ್ರಹವನ್ನು ಪ್ರತಿಷ್ಠಾಪಿಸಿದ್ದರು. ಪ್ರತಿನಿತ್ಯವೂ ಅರ್ಚಕರು ಹಾಲು, ಮೊಸರು, ತುಪ್ಪ, ಜೇನುತುಪ್ಪ, ಎಳನೀರುಗಳಿಂದ ಪಂಚಾಮೃತದ ಅಭಿಷೇಕ ಮಾಡುತ್ತಿದ್ದರು. ಹೂವು, ಗಂಧ, ಚಿನ್ನ-ಬೆಳ್ಳಿಯ ಆಭರಣಗಳಿಂದ ಅಲಂಕಾರ ಮಾಡುತ್ತಿದ್ದರು. ಧೂಪ-ದೀಪ-ನೈವೇದ್ಯಗಳನ್ನು ಅರ್ಪಿಸಿ ಮಂಗಳಾರತಿ ಮಾಡುತ್ತಿದ್ದರು. ಪ್ರತಿನಿತ್ಯವೂ ದೇವಾಲಯಕ್ಕೆ ಬರುತ್ತಿದ್ದ ಜನ ಭಕ್ತಿಯಿಂದ ಬಾಗಿ ನಮಸ್ಕರಿಸುತ್ತಿದ್ದರು.ಈ ಎಲ್ಲಾ ವೈಭವವನ್ನು ವಿಗ್ರಹದ ಕಲ್ಲಿನ ಜೊತೆಗೆ ಹುಟ್ಟಿದ್ದ ಮೆಟ್ಟಿಲ ಕಲ್ಲು, ಕಂಭದ ಕಲ್ಲು, ಪೀಠದ ಕಲ್ಲುಗಳು ನೋಡುತ್ತಾ ತಮ್ಮ ದೌರ್ಭಾಗ್ಯಗಳನ್ನು ಹಳಿದುಕೊಳ್ಳುತ್ತಿದ್ದವು.

ದೇವಾಸ್ಥಾನಕ್ಕೆ ಬರುತ್ತಿದ್ದ ಜನರ ಕಾಲಿನ ತುಳಿತ-ತಿವಿತಗಳಿಂದ ಬೇಸತ್ತಿದ್ದ ಮೆಟ್ಟಿಲಿನ ಕಲ್ಲು, ವಿಗ್ರಹದ ಕಲ್ಲನ್ನು ಮಾತನಾಡಿಸಿತು. "ಅಣ್ಣ, ನಾನೂ ನೀನೂ ಒಂದೇ ಬಂಡೆಯ ಕಲ್ಲಿನಿಂದ ಜನ್ಮ ತಾಳಿದ್ದೇವೆ. ಆದರೆ ನನ್ನ ದೌಬಾಗ್ಯ ನೋಡು, ನಿನ್ನ ಸೌಭಾಗ್ಯ ನೋಡು! ನಿತ್ಯವೂ ನನ್ನನ್ನು ತುಳಿಯುತ್ತಾರೆ, ತಿವಿಯುತ್ತಾರೆ. ನಿನ್ನ ವೈಭವ ಅದೇನು ಹೇಳುವುದು: ನಿತ್ಯವೂ ಅಭಿಷೇಕ, ದೂಪ, ದೀಪ ನೈವೇದ್ಯ, ಎಲ್ಲರೂ ತಲೆಬಾಗಿ ನಮಸ್ಕರಿಸುತ್ತಾರೆ."

ವಿಗ್ರಹದ ಕಲ್ಲು–"ತಮ್ಮಾ, ಏತಕ್ಕಾಗಿ ದುಃಖಪಡುವೆ? ನಾನು ಈ ಪಟ್ಟಕ್ಕೆ ಏರಬೇಕಾದರೆ ಆತ ಹೊಡೆದ ಎಲ್ಲಾ ಪೆಟ್ಟುಗಳನ್ನು ಮೌನವಾಗಿ ಸಹಿಸಿಕೊಂಡೆ. ಹಿಂದೆ ಅನುಭವಿಸಿದ ಕಷ್ಟದಿಂದಲೇ, ಇಂದು ನಾನು ಗೌರವ–ಸಂಮಾನ–ಸುಖ ಪಡೆಯುತ್ತಿದ್ದೇನೆ.ಚಾಣದ ಪೆಟ್ಟನ್ನು ತಪ್ಪಿಸಿಕೊಂಡು ಉರುಳಿಬಿದ್ದ ನೀನು ಮೆಟ್ಟಿಲ ಕಲ್ಲಾದೆ. ಕಡಮೆ ಪೆಟ್ಟು ತಿಂದ ಇನ್ನೊಬ್ಬ ತಮ್ಮ ಕಂಭ ಆಗಿದ್ದಾನೆ. ಮತ್ತೊಬ್ಬ ತಮ್ಮ ಪೀಠದ ಕಲ್ಲಾಗಿದ್ದಾನೆ.ಕಡಮೆ ಪೆಟ್ಟು ತಿಂದ ನನಗೆ ಈಗ ತುಳಿತದ ಪೆಟ್ಟು. ಹೆಚ್ಚು ಪೆಟ್ಟು ತಿನ್ನದ ಕಂಭಣ್ಣನನ್ನು ನೈವೇದ್ಯ ತಿಂದ ಕೈ ಒರೆಸಿ ಅವಮಾನಿಸುತ್ತದೆ"– ಎಂದು ಹೇಳಿತು

'Today' strain and struggle is tomorrow's gain and muscle' ಎಂಬುದೊಂದು ಆಂಗ್ಲೋಕ್ತಿ. ಶ್ರಮ ಏವ ಜಯತೇ ಎಂಬುದು ಸಂಸ್ಕೃತ ಸುಭಾಷಿತದ ಮಾತು.

ನೋವಿನ– ಸೋಲಿನ ಭಯದಿಂದ ನಾವು ನಮ್ಮ ಆಂತರಿಕ ವಿಕಾಸದ ಬಾಗಿಲನ್ನು ಮುಚ್ಚಿ ಕುಳಿತರೆ ಅಲ್ಲಿ ಆಗ ಸೂರ್ಯೋದಯದ ಹೊಂಗಿರಣ ಪ್ರವೇಶಿಸುವುದಿಲ್ಲ. ಪ್ರಾಕೃತಿಕ ತಾಜಾ ಗಾಳಿಯೂ ಪ್ರವೇಶಿಸುವುದಿಲ್ಲ. ಅಲ್ಲಿ ಹೊಸತನವೆಂಬುದು ಯಾವುದೂ ಇರುವಿದಿಲ್ಲ. ಎಲ್ಲವೂ ಬರಡು ಬರಡಾಗಿರುವುದು. ಕಷ್ಟಗಳನ್ನು ಧೈರ್ಯವಾಗಿ ಎದುರಿಸಿ ಜೀವಂತಿಕೆಯಿಂದಿರುವುದು ಯಾವತ್ತೂ ಶ್ರೇಷ್ಠ.

ಸಂತಸದ ಗುಲಾಬಿಯ ಹಿಂದೆ ಸಂಕಟದ ಮುಳ್ಳಿರುತ್ತದೆ. ಸುಖದ ಹೊಟ್ಟೆಗೆ ದುಃಖದ ಬೆನ್ನಿರುತ್ತದೆ. ನಗುವ ಮುಖದ ಹಿಂದೆ ತಪಿಸಿದ ಮನಸ್ಸಿರುತ್ತದೆ. ಸಂಕಟ–ಸಂತಸಗಳು ಒಂದೇ ಬಂಡಿಯ ಎರಡು ಚಕ್ರವಿದಂತೆ. ಸುಖವನ್ನು ಬಿಟ್ಟು ದುಃಖವಿರಲಾರದು. ದುಃಖವಿರಲಾರದು. ದುಃಖವನ್ನು ಬಿಟ್ಟು ಸುಖವಿರಲಾರದು. ಅದು ಒಂದು ರೀತಿಯಲ್ಲಿ ಪರಸ್ಪರ ಬೇರ್ಪಡಿಸಲಾಗುದಂತಹ ಸಯಾಮಿ ಮಕ್ಕಳಿದ್ದಂತೆ.

ಜಗತ್ತಿನಲ್ಲಿ ಕಷ್ಟ, ನೋವು, ಕತ್ತಲೆ ಇರುವುದರಿಂದಲೇ ಸುಖ, ನಲಿವು, ಹಗಲುಗಳು ಇವೆ ಎಂಬುದನ್ನು ನಾವು ಮರೆಯಬಾರದು. ಕಷ್ಟವೆಂಬುದು ದೇವರ ಕೊಡುಗೆ. ಇಂತಹ ಕಷ್ಟದ ಸಮಯದಲ್ಲಿಯೇ ನಮ್ಮ ಇಷ್ಟ–ಮಿತ್ರರ, ಬಂಧು–ಬಳಗದವರ ಬಣ್ಣ ಗೊತ್ತಾಗುವುದ. ಅಷ್ಟು ಮಾತ್ರವಲ್ಲ, ಕಷ್ಟದ ಕಾಲದಲ್ಲಿಯೆ ನಾವು ನಮ್ಮ ಅಂತಃಸತ್ತ್ವವನ್ನು ಬೆಳಗಿಸಿಕೊಳ್ಳುವುದು. ನಮ್ಮ ಕಷ್ಟದ ಸಂಕಟದ ಸಮಯದಲ್ಲಿಯೇ ನಾವು ನಮ್ಮ ನೈತಿಕ ಹಾಗೂ ಆಧ್ಯಾತ್ಮಿಕ ಶಕ್ತಿಗಳನ್ನು ವೃದ್ಧಿಸಿಕೊಳ್ಳುವುದು. ಆದ್ದರಿಂದ ಕಷ್ಟ ಬಂದಾಗಲೆಲ್ಲ ಇದು ದೇವರ ಪ್ರಸಾದ ಎಂಬುದಾಗಿ ಭಾವಿಸಿದರೆ ಕಷ್ಟದ ತೀವ್ರತೆ ಕಡಮೆಗೊಂದು ನಾವು ಬೆಳೆಯಲು ಸಹಾಯವಾಗುತ್ತದೆ.

ಜ್ಯೌತಿಷದ ಪ್ರಕಾರ ಮನುಷ್ಯನನ್ನು ಅಪಾರ ಸಂಕಷ್ಟಕ್ಕೀಡುಮಾಡುವ ಶನಿದಶೆ ಮೊದಲು ಕಷ್ಟ ಕೊಟ್ಟು ಕೊನೆಗೆ ಅಧ್ಯಾತ್ಮದತ್ತ ಕೊಂಡೊಯ್ಯುತ್ತದಂತೆ. ಅದೇ ರೀತಿ

ದುಃಖ, ಸಂಕಟ, ಅಡ್ಡಿ, ಆತಂಕಗಳು ನಮ್ಮನ್ನು ಆಧ್ಯಾತ್ಮಿಕ ಸಾಕ್ಷಾತ್ಕಾರದ ಕಡೆಗೊಯ್ಯುವ ಶಿಕ್ಷಣ ನೀಡುತ್ತದೆ.

ಕ್ರಿಕೆಟ್ ದಿಗ್ಗಜ ಸಚಿನ್ ತೆಂಡುಲ್ಕರ್ ಟೀಕಿಸುತ್ತಿದ್ದವರನ್ನು ಕುರಿತು ಒಮ್ಮೆ ಒಂದು ಮಾತು ಹೇಳಿದರು: "People throw stones at you and you convert them into milestones" – ಎಂಬುದಾಗಿ. ಟೀಕೆಯ ಕಲ್ಲುಗಳನ್ನೇ ಸಾಧನೆಯ ಮೆಟ್ಟಿಲನ್ನಾಗಿಸುವುದರಲ್ಲಿ ಸ್ವತಃ ಸಚಿನ್‌ರೇ ಉದಾಹರಣೆಯಾಗಿ ನಿಂತರು. ಅವರು ಆಟದಲ್ಲಿ ವಿಫಲರಾದಾಗ ಟೀಕೆಗಳ ಸುರಿಮಳೆಯೇ ಸುರಿಯುತ್ತಿತ್ತು. ಆದರೆ ಇಂತಹ ಯಾವ ಟೀಕೆಗೂ ಸಚಿನ್ ಬಾಯಿಯಿಂದ ಉತ್ತರಿಸಲಿಲ್ಲ. ಬದಲಿಗೆ ಅವರ ಬ್ಯಾಟ್ ಮಾತನಾಡುತ್ತಿತ್ತು. ಮತ್ತೊಮ್ಮೆ ಸೆಂಚುರಿ ಹೊಡೆದು ಟೀಕಾಕಾರರ ಬಾಯಿ ಮುಚ್ಚಿಸುತ್ತಿದ್ದರು.

ವಿವೇಕಚಿತ್ತ ಇರಲಿ

ಕಷ್ಟಗಳು ಮನುಷ್ಯನನ್ನು ಎಂತಹ ಘೋರ ಕೂಪಕ್ಕೆ ತಳ್ಳುತ್ತವೆಂದರೆ ಈ ಬದುಕೇ ವ್ಯರ್ಥವೆಂದು ಜೀವನದ ಮೇಲೆ ಜಿಗುಪ್ಸೆ ತರಿಸುತ್ತವೆ. ಇಂದಿನ ದಿನಗಳಲ್ಲಿ ಬ್ಯಾಂಕಿನಲ್ಲಿ ಬೆಳೆಗಾಗಿ ಸಾಲ ಮಾಡಿದ ರೈತ ಸಕಾಲದಲ್ಲಿ ಸಾಲ ಮರುಪಾವತಿ ಮಾಡಲು ಸಾಧ್ಯವಾಗದೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ. ಪರೀಕ್ಷೆಗಳಲ್ಲಿ ಫೇಲಾದೆವೆಂದೂ, ನಿರೀಕ್ಷಿಸಿದಷ್ಟು ಅಂಕಗಳು ದೊರೆಯಲಿಲ್ಲವೆಂದೋ ವಿದ್ಯಾರ್ಥಿಗಳು ಪ್ರಾಣ ಕಳೆದುಕೊಳ್ಳುವುದುಂಟು. ವ್ಯಾಪಾರದಲ್ಲಿ ನಷ್ಟವಾಯಿತೆಂದು ಜೀವನಕ್ಕೆ ಅಂತ್ಯಹಾಡುವ ವ್ಯಾಪಾರಿಗಳಿದ್ದಾರೆ. ಪ್ರಿಯತಮನೊ, ಪ್ರಿಯತಮೆಯೊ, ಸಿಗಲಿಲ್ಲವೆಂದು ಸಾವಿಗೆ ಶರಣಾಗುವವರಿದ್ದಾರೆ. ಆದರೆ ತುಸು ಶಾಂತ ಚಿತ್ತರಾಗಿ ವಿವೇಕದಿಂದ ಯೋಚನೆ ಮಾಡಿದಲ್ಲಿ ಎಲ್ಲಾ ಕಷ್ಟ–ನಷ್ಟಗಳನ್ನೂ ದೂರಮಾಡಲು ಸಾದ್ಯವಿದೆ.

'ಸ್ವಾತಂತ್ರ್ಯ ನಮ್ಮ ಜನ್ಮಸಿದ್ಧ ಹಕ್ಕು' ಎಂದು ಬ್ರಿಟಿಷ್ ಸಾಮ್ರಾಜದ ವಿರುದ್ಧ ಹೋರಾಟ ನಡೆಸಿದ್ದ ತಿಲಕರನ್ನು ಬಂಧಿಸಿದ ಸರಕಾರವು, ಅವರನ್ನು ದೂರದ ಬರ್ವಾದ ಜೈಲಿನಲ್ಲಿರಿಸಿತ್ತು. ಕಗ್ಗತ್ತಲ ಸೆರೆವಾಸದಲ್ಲಿ, ಬಂಧು–ಬಳಗ, ಮಿತ್ರಪರಿವಾರದವರೆಲ್ಲರಿಂದ ದೂರವಾಗಿ ಏಕಾಂತದಲ್ಲಿ ಬದುಕು ಸವೆಸಬೇಕಾಗಿ ಬಂದಾಗ ಅವರು ಅತ್ಯಂತ ನಿರಾಶರಾದರು ಎಷ್ಟೊಂದು ನಿರಾಶೆಯೆಂದರೆ ಆತ್ಮಹತ್ಯೆಯನ್ನೇ ಮಾಡಿಕೊಳ್ಳೋಣವೆನ್ನಿಸಿತ್ತು.

ಆದರೆ ಒಂದು ದಿನ ಜೈಲಿನ ಕೊಠಡಿಯಲ್ಲಿ ಒಂದು ದೃಶ್ಯವನ್ನು ಕಂಡರು. ಇರುವೆಗಳ ಒಂದು ಗುಂಪು ಸಾಲಾಗಿ ಹೋಗುತ್ತಿತ್ತು. ಅದನ್ನು ಕುತೂಹಲದಿಂದ ಕಂಡ ಅವರು ಅವುಗಳ ದಾರಿಯಲ್ಲಿ ಒಂದು ಸಣ್ಣ ಪೆನ್ಸಿಲನ್ನಿರಿಸಿದರು. ಇರುವೆಗಳು ಯಃಕಶ್ಚಿತ್ ದುರ್ಬಲ ಜೀವಿಗಳು. ಆದರೆ ಈ ಪೆನ್ಸಿಲಿಗೆ ಅಂಜಲಿಲ್ಲ. ದಾರಿಯನ್ನೂ ಬದಲಿಸಲಿಲ್ಲ. ಕೆಲವು ಇರುವೆಗಳು ಪೆನ್ಸಿಲಿನಡಿಯಿಂದ ತೂರಿ ಸಾಗಿದವು. ಇನ್ನು

ಕೆಲವು ಪೆನ್ಸಿಲಿನ ಮೇಲಕ್ಕೇರಿ ಸಾಗಿದವು. ಅಂತೂ ಯಶಸ್ವಿಯಾಗಿ ತಾವು ಹೋಗಿ ಸೇರಬೇಕಾದ ಗುರಿಯನ್ನು ಅವು ತಲಪಿದಾಗ ತಿಲಕರ ಒಳಗಣ್ಣು ತೆರೆದುಕೊಂಡಿತು.

'ನಾನೇಕೆ ಈ ಬ್ರಿಟಿಷ್ ಸರಕಾರಕ್ಕೆ ಅಂಜಬೇಕು? ಇಷ್ಟು ಸಣ್ಣ ಇರುವೆಗಳೇ ಧೈರ್ಯದಿಂದ ವಿಪತ್ತನ್ನು ಎದುರಿಸಿ ಮುನ್ನಡೆಯುವಲ್ಲಿ ಯಶಸ್ವಿಯಾದರೆ, ನಾನೇಕೆ ಯಶಸ್ವಿಯಾಗಲು ಸಾಧ್ಯವಿಲ್ಲ?'- ಎಂದು ಧೈರ್ಯತಳೆದ ಅವರು ತಮ್ಮ ಹೋರಾಟವನ್ನು ಮುಂದುವರಿಸಲು ನಿರ್ಧರಿಸಿದರು.

ಕಷ್ಟ ಬಂದಾಗಲೇ ಮನುಷ್ಯನಲ್ಲಿ ಸೃಜನಶೀಲತೆ ಸೃಷ್ಟಿಯಾಗುವುದು. ಹೊಡೆತ ಬಿದ್ದಾಗಲೇ ಬದುಕು ಚೆಂಡಿನಂತೆ ಪುಟಿದೇಳುತ್ತದೆ. ಇದನ್ನೇ ಡಿ.ವಿ.ಜಿ. ಕಗ್ಗದಲ್ಲಿ ಬಹಳ ಸೊಗಸಾಗಿ ಹೇಳಿದ್ದಾರೆ.

ರದನೋದಯ ಜ್ವರಕೆ ಸಿಲುಕದಿಹ ನರಜಂತುವಿರದು।
ವಿಧಿಯೊದೆಗೆ ಸಿಕ್ಕದಿಹ ನರಜಂತುವಿರದು॥
ಒದೆಪೆಟ್ಟು ಮುಗಿದಂದು ರಾಹುದಂಷ್ಟ್ರದೆ ಹೊರಟ।
ವಿಧುಬಿಂಬವೋ ನೀನು – ಮಂಕುತಿಮ್ಮ॥

ಹಲ್ಲು ಹುಟ್ಟುವಾಗ ಮಗುವಿಗೆ ಜ್ವರ ಬರುತ್ತದೆ. ಜ್ವರ ಬರದಿದ್ದರೆ ಹಲ್ಲು ಹುಟ್ಟಲಾಗುವುದಿಲ್ಲ. ಎಲ್ಲಾ ಮಕ್ಕಳೂ ಈ ನೋವನ್ನು ಅನುಭವಿಸಿ ತೀರಲೇಬೇಕು. ಹಾಗೆಯೇ ಪ್ರತಿಯೊಬ್ಬ ಮನುಷ್ಯನೂ ವಿಧಿಯ ಹೊಡೆತನಕ್ಕೆ ಒಂದಲ್ಲ ಒಂದು ಸಲ ಸಿಕ್ಕಿಬಿದ್ದೇ ಬೀಳುತ್ತಾನೆ.ರಾಹು ಮತ್ತು ಕೇತುಗಳ ಬೆಳಗಲಾರಂಭಿಸಿದ.ಹೀಗೆಯೇ ಪೆಟ್ಟುತಿಂದ ನಂತರ ನಾವು ಬೆಳಗುತ್ತೇವೆ.

ನೋವಿಲ್ಲದೆ ಸೃಷ್ಟಿ ಎಂಬುದೇ ಇಲ್ಲ. ಒಂದು ಮಗು ಜನಿಸಬೇಕಾದರೆ ತಾಯಿ ಅಪಾರ ಕಷ್ಟ ಅನುಭವಿಸುತ್ತಾಳೆ. ಮಗುವಿನ ಮುಖ ನೋಡಿದಾಗ ಆಕೆ ತಾನುಂಡ ಅಪಾರ ಕಷ್ಟವನ್ನು ಮರೆಯುತ್ತಾಳೆ. ನಮ್ಮ ಹಿರಿಯರು ಒಂದು ಮಾತನ್ನು ಹೇಳಿದ್ದಾರೆ.'ಸುಖ ಕೂಡ ಕಷ್ಟದಿಂದಲೇ ಬರುವುದು' ಎಂಬುದಾಗಿ ಜೀವನದುದ್ದಕ್ಕೂ ಸುಖಪಡುತ್ತಲೇ ಯಾರೂ ಮಹಾಪುರುಷರಾಗಲಿಲ್ಲ. ಸುಖದಿಂದಲೇ ಸಾಧನೆ ಎಂಬುದು ಅಪ್ಪಟ ಸುಳ್ಳು. ಅವನತಿಯ ಬೀಜ ಸುಖದಲ್ಲಡಗಿದ್ದರೆ, ಉನ್ನತಿಯ ಬೀಜ ಕಷ್ಟದಲ್ಲಡಗಿದೆ.

ಯಾವುದೇ ಕಷ್ಟಪಡದೆ ಮರದ ಆಶ್ರಯದಲ್ಲಿ ಬಳ್ಳಿ ಬೆಳೆದಂತೆ ಬೆಳೆಯುವುದಕ್ಕಿಂತ ಕಷ್ಟದಿಂದ ಗಟ್ಟಿ ಮರದಂತೆ ಬಳ್ಳಿಗೆ ಆಶ್ರಯವಾಗಿ ಬೆಳೆಯುವುದು ಉತ್ತಮ. ಸುಖದಿಂದ ಬೆಳೆದಬಳ್ಳಿ ಸದಾ ದುರ್ಬಲ. ಕಷ್ಟದಿಂದ ಬೆಳೆದ ಮರ ಯಾವತ್ತೂ ಪ್ರಬಲ. ದುರ್ಬಲತೆಯಲ್ಲಿ ಪರಾವಲಂಬನೆ ಇದೆ. ಪ್ರಬಲತೆಯಲ್ಲಿ ಸ್ವಾವಲಂಬನೆ ಇದೆ.

–ಉತ್ಥಾನ್ ಸಾಭಾರ

ಗಾಂಧೀ: ದಲಿತಪರ ಕಾವಲು ತತ್ವ

– ಮೊಗಳ್ಳಿ ಗಣೇಶ್

(ಈ ಪರಿವರ್ತನೆಯ ಪ್ರಕ್ರಿಯೆ ಜಾತಿನಿಷ್ಠ ಸಮಾಜದಲ್ಲಿ ಸದಾ ಆಗುತ್ತಲೇ ಇರಬೇಕು. ಗಾಂಧೀಜಿ ಅಷ್ಟರಮಟ್ಟಿಗೆ ನಮ್ಮೆಲ್ಲರ ಪ್ರಜ್ಞೆಯ ಭಾಗವಾಗಿಯೇ ಇರಬೇಕು. ಅಂಬೇಡ್ಕರ್ ಆ ಪ್ರಜ್ಞೆಯ ಮತ್ತೊಂದು ವಿಸ್ತರಣೆಯಾಗಿ ಬೆಳೆಯುತ್ತಲೇ ಇರಬೇಕು. ಆಗ ಜಾತಿಯ ವಿರಾಟ್ ಶಾಪದಿಂದ ಭಾರತ ಮುಕ್ತವಾಗಲು ಸಾಧ್ಯ).

ಅಸ್ಪೃಶ್ಯತೆಯ ವಿರಾಟ್ ಪಾಶ್ಚಾತ್ತಾಪ, ಪಾಪಪ್ರಜ್ಞೆ ಮೊದಲಿಗೆ ಭಾರತದಲ್ಲಿ ಆದದ್ದು ಮಹಾತ್ಮ ಗಾಂಧೀಜಿ ಅವರ ಮನದಲ್ಲಿ. ಒಂದು ವೇಳೆ ಗಾಂಧೀಜಿ ಅವರಲ್ಲಿ ಈ ಪರಿಯ ಜಾತಿ ವ್ಯವಸ್ಥೆಯ ಕ್ರೌರ್ಯದ ಅರಿವಾಗದೇ ಹೋಗಿದ್ದಿದ್ದರೆ, ಅಷ್ಟರಮಟ್ಟಿಗೆ ಜಾತಿಯ ನರಕ ಮೇಲು ಜಾತಿಗಳ ಮನದಲ್ಲಿ ಇನ್ನೂ ಬಲವಾಗಿಯೇ ಉಳಿದಿರುತ್ತಿತ್ತು. ಗಾಂಧೀಜಿಯ ಕಾರಣದಿಂದಲೇ ಅನಿವಾರ್ಯವಾಗಿ ಹಿಂದೂ ಸನಾತನಿಗಳು ಕೂಡ ಕೆಲಮಟ್ಟಿನ ಜಾತಿವಾದವನ್ನು ಉದಾರವಾದಿಯಾಗಿ ನೋಡಬೇಕಾದ ಒತ್ತಡ ಉಂಟಾದದ್ದು. ಪ್ರಜ್ಞಾವಂತ ಆದವರೆಲ್ಲ ಗಾಂಧೀಜಿಯ 'ಹರಿಜನ ಪ್ರಜ್ಞೆ'ಯಿಂದಾಗಿಯೇ ಜಾತ್ಯತೀತವಾಗಿ ಆಲೋಚಿಸುವ ಕ್ರಮ ಕಂಡುಕೊಂಡದ್ದು. ಗಾಂಧೀವಾದಿಗಳು ಜಾತಿ ವಿನಾಶದ ಕಾಯಕದಲ್ಲಿ ತೊಡಗಿದ್ದರಿಂದಲೇ ಸ್ವತಃ ದಲಿತರಿಗೂ ಎಚ್ಚರವಾದದ್ದು.

ನಾನು ಹುಟ್ಟಿ ಬೆಳೆದ ಮೈಸೂರು ಸೀಮೆಯಲ್ಲಿ ಗಾಂಧೀ ಮತ್ತು ಗಾಂಧೀವಾದಿಗಳದೇ ಪ್ರಭಾವ ಹೆಚ್ಚಾಗಿತ್ತು. ನಮ್ಮ ಮನೆಯಲ್ಲಿ ಗಾಂಧೀಜಿಯ ಪೋಟೊ ಇತ್ತು. ಅದರ ಜೊತೆಯಲ್ಲೇ ನಾಲ್ವಡಿ ಕೃಷ್ಣರಾಜರ ಚಿತ್ರಪಟವಿತ್ತು. ಅಂಬೇಡ್ಕರ್ ಅವರ ಪೋಟೊ ಇರಬೇಕಿತ್ತಾದರೂ ಅವರ ಪ್ರಭಾವ ನಮಗೆ ಆಗಿಯೇ ಇರಲಿಲ್ಲ. ನಮ್ಮ ತಾತ ಗಾಂಧೀಜಿಯನ್ನು ಕಂಡು ಅವರ ಪಾದ ಮುಟ್ಟಿ ಬಂದಿದ್ದ. ಅವರ ಪ್ರಭಾವ ನಮ್ಮ ತಾತನ ಮೇಲೆ ಗಾಢವಾಗಿ ಆಗಿದ್ದರಿಂದ ಯಾವತ್ತೂ ಗಾಂಧೀಯ ಸ್ಮರಣೆಯನ್ನು ಅಹಿಂಸೆಯ ತತ್ವವನ್ನು ಸರ್ವೋದಯದ ಆಶಯವನ್ನು ತಾತ ನಮಗೆಲ್ಲ ಬೋಧಿಸಿದ್ದ.

ಗಾಂಧೀ ಹೆಚ್ಚೊ, ಅಂಬೇಡ್ಕರ್ ಹೆಚ್ಚೊ ಎಂಬ ಹೋಲಿಕೆಯೇ ತಪ್ಪು. ಅವೆರಡೂ ಭಾರತದ ಅತ್ಮಸಾಕ್ಷಿಯ ಎರಡು ಕಣ್ಣುಗಳು. ಇಬ್ಬರ ದೃಷ್ಟಿಕೋನಗಳು ಯಾವತ್ತೂ ನಮ್ಮ ದೇಶಕ್ಕೆ ಬೇಕು. ದಲಿತರ ಮೇಲೆ ಗಾಂಧೀ ತೋರಿದ ಪ್ರೀತಿಯಿಂದಾಗಿಯೇ ದಲಿತರ ಮೇಲಿನ ಎಷ್ಟೋ ಹಲ್ಲೆಗಳು ಒಂದಿಷ್ಟಾದರೂ ತಗ್ಗಿವೆ. ಗಾಂಧೀಜಿಯ ಪ್ರೀತಿಯ ಅಂತಃಕರಣದ ದಾಹದಲಿ ನಲುಗುತ್ತಿದ್ದ ದಲಿತರ ಪಾಲಿಗೆ

ಗುಟುಕು ಜೀವವನ್ನಾದರೂ ನೀಡಿದೆ. ಗಾಂಧೀವಾದವು ಜಾತಿಯ ವಿರುದ್ಧದ ಒಂದು ಎಚ್ಚರಿಕೆಯ ಗಂಟೆಯಂತೆ ಕೆಲಸ ಮಾಡಿದೆ. ಪ್ರಜಾಪ್ರಭುತ್ವಕ್ಕೆ ಅಂಬೇಡ್ಕರ್ ಜಾತ್ಯತೀತವಾದ ಸಂವೇದನೆಯನ್ನು ಬಿತ್ತಿದ್ದರೆ, ಗಾಂಧೀಜಿ ಮನಸ್ಸಿನ ಒಳಗಿನ ಜಾತಿಯ ಕ್ರೌರ್ಯವನ್ನು ತಗ್ಗಿಸಿಕೊಳ್ಳಲು ದಾರಿ ಮಾಡಿದ್ದಾರೆ. ಪೂನಾ ಒಪ್ಪಂದದಲ್ಲಿ ಗಾಂಧೀ ಹಾಗೂ ಅಂಬೇಡ್ಕರ್ ಅವರ ನಡುವೆ ಉಂಟಾದ ಭಿನ್ನಾಭಿಪ್ರಾಯವು ದಲಿತ ವಿಮೋಚನೆಯ ಸಂದರ್ಭದ ಚಾರಿತ್ರಿಕ ದ್ವಂದ್ವವೇ ಹೊರತು ಗಾಂಧೀಜಿ ದಲಿತರ ವಿರುದ್ಧವಾಗಿದ್ದರೂ, ಸನಾತನಿಗಳ ಪರವಾಗಿ ಮುಗುಮ್ಮಾಗಿ ಇದ್ದರು ಎಂತಲ್ಲ. ಗಾಂಧೀಜಿಯ ದಲಿತನಿಷ್ಠೆಯು ಪ್ರಶ್ನಾತೀತವಾದದ್ದು. ದಲಿತರಾದ ನಾವು ಗಾಂಧೀಜಿ ಅವರನ್ನು ಕಳೆದುಕೊಂಡರೆ ಅದರಿಂದ ಸನಾತನಿಗಳಿಗೇ ಹೆಚ್ಚು ಲಾಭ. ಆಗ ಅಂಬೇಡ್ಕರ್ ವಾದವನ್ನೂ ದಮನ ಮಾಡಲು ಬಲಪಂಥೀಯರಿಗೆ ಸುಲಭವಾಗಿಬಿಡುತ್ತದೆ.

ದಲಿತ ಸಮಸ್ಯೆ ಅಂಬೇಡ್ಕರ್ ತತ್ವ ಒಂದರಿಂದಲೇ ಪರಿಹಾರವಾಗುವುದಿಲ್ಲ. ಹಾಗೆಂದು ಗಾಂಧೀವಾದದಿಂದಲೇ ಜಾತಿ ವಿನಾಶ ಆಗುತ್ತದೆಂದು ಹೇಳುತ್ತಿಲ್ಲ. ದಲಿತ ಸಮಸ್ಯೆ ಒಂದು ಭಾರತೀಯ ಸಮಸ್ಯೆ. ಒಂದಲ್ಲ ಒಂದು ಬಗೆಯಲ್ಲಿ ಇದು ಎಲ್ಲರ ಸಮಸ್ಯೆಯೂ ಹೌದು. ಜಾತಿ ವ್ಯವಸ್ಥೆಯಿಂದ ವಿಮುಕ್ತನಾಗುವುದು ಎಂದರೆ ನಾನು ನನ್ನ ತಲೆ ಮೇಲೆ ನಿಂತಿರುವವರೆಲ್ಲರ ಮುಕ್ತಿಯನ್ನೂ ಸಾಧಿಸಿದಂತೆ. ನಾನು ಮಾತ್ರ ಜಾತಿಯ ನರಕದಿಂದ ತಪ್ಪಿಸಿಕೊಂಡರೆ ಸಾಲದು. ಆ ಜಾತಿಯ ನರಕವನ್ನು ಪಾಲಿಸುತ್ತಿರುವವರು ಮೊದಲು ಆ ನರಕದಿಂದ ಪಾರಾಗಬೇಕಾಗಿದೆ. ಗಾಂಧೀಯ ಸರ್ವೋದಯದಲ್ಲಿ ಈ ಆಶಯವಿದೆ, ಧ್ಯಾನವಿದೆ, ಅಧ್ಯಾತ್ಮವಿದೆ. ಬಹಿಷ್ಕೃತರಾಗಿದ್ದ ದಲಿತರಿಗೆ ಗಾಂಧೀವಾದ ಎಷ್ಟು ತಲುಪಿತೊ ಏನೊ. ಆದರೆ ಗಾಂಧೀವಾದವು ದಲಿತರ ಪರವಾದ ಒಂದು ಕಾವಲು ತತ್ವದಂತೆ ಕೆಲಸ ಮಾಡಿದೆ. ಅದು ಮುಂದೆಯೂ ಈ ಕೆಲಸವನ್ನು ಮಾಡಲಿದೆ. ತಣ್ಣಗೆ ಭಾರತವೀಗ ಬಹುರಾಷ್ಟ್ರೀಯ ಕಂಪನಿಗಳ ಸಾಮಾಜಿಕ ತತ್ವಕ್ಕೆ ತಕ್ಕಂತೆ ಸಾಗುತ್ತಿದೆ. ಅದರಲ್ಲಿ ಜಾತಿ ವ್ಯವಸ್ಥೆಯು ಹೊಸ ಹೊಸ ರೂಪ ಪಡೆದು ಅದು ಮತ್ತೂ ಹರಿತವಾಗಿ ಜಾಣ್ಮೆಯನ್ನೆಲ್ಲ ಕರಗತ ಮಾಡಿಕೊಂಡು ದಲಿತ ಸಮಸ್ಯೆಯನ್ನು ಮತ್ತಷ್ಟು ಸಂಕೀರ್ಣವಾಗಿಸಬಲ್ಲದು. ಅದಕ್ಕೆ ತಕ್ಕಂತೆಯೇ ಬಲಪಂಥೀಯ ರಾಜಕಾರಣವೂ ಮುನ್ನುಗ್ಗುತ್ತಿದೆ. ಅಂತಲ್ಲಿ ಗಾಂಧೀವಾದವು ಇವತ್ತಿನದಗಿಂತಲೂ ಹೆಚ್ಚು ಪ್ರಸ್ತುತವಾಗಲಿದೆ. ಗಾಂಧೀಯನ್ನು ಬಿಡಿಯಾದ ವಿಚಾರಗಳಿಂದ ನೋಡಿದರೆ ಏರುಪೇರುಗಳು ಕಾಣುವುದು ಸಹಜ. ಅವರನ್ನು ಭಾರತದ ಆತ್ಮಸಾಕ್ಷಿಯ ಅಖಂಡ ಪ್ರಜ್ಞೆಯಿಂದಲೇ ಭಾವಿಸಬೇಕು. ಬುದ್ಧನ ದುಃಖತತ್ವದ ಗುಣವೂ ಗಾಂಧೀಜಿ ಅವರ ವಿಚಾರಗಳ ಆಳದಲ್ಲಿ ಪರೋಕ್ಷವಾಗಿದೆ. ಅದಿಲ್ಲದಿದ್ದರೆ ದಲಿತರ ಪರವಾದ ಕರುಣೆ ಗಾಂಧೀಜಿಗೆ ಸಾಧ್ಯವಾಗುತ್ತಿರಲಿಲ್ಲ. ಗಾಂಧೀಜಿ ನೋವಿನ ಹಾದಿಯಲ್ಲಿ ಭಾರತವನ್ನು ಧ್ಯಾನಿಸಿದವರು. ಅಖಂಡ ಭಾರತವನ್ನು ಒಂದೇ ಕರುಳಿಂದ

ಮಿಡಿದವರು. ದಲಿತರು ಗಾಂಧೀವಾದವನ್ನು ನಿರಾಕರಿಸಿದಂತೆಲ್ಲ ಬಲಪಂಥೀಯರೂ ಮತೀಯವಾದಿಗಳೂ ಒಳಗೊಳಗೇ ಸಂಭ್ರಮಿಸುತ್ತಾರೆ. ಗಾಂಧೀಯು ದಲಿತರು ಪರವಾದ ಅಹಿಂಸೆಯ ಅತ್ಯುನ್ನತ ಸಾಧನ. ಇದನ್ನವರು ಕಳೆದುಕೊಳ್ಳಲಿ ಎಂಬುದೇ ಸನಾತನಿಗಳ ಅಪೇಕ್ಷೆ. ನಾವಿದಕ್ಕೆ ಯಾವತ್ತೂ ಅವಕಾಶ ಮಾಡಿಕೊಡಕೂಡದು.

ಗಾಂಧೀವಾದವು ಜಾರಿಯಾಗುವುದಕ್ಕಿಂತಲೂ ಅದು ಅಪವ್ಯಾಖ್ಯಾನಕ್ಕೆ ಒಳಗಾದದ್ದೇ ಹೆಚ್ಚು. ಇದರಲ್ಲಿ ರಾಜಕಾರಣವೂ ಇದೆ, ಜಾತಿವಾದವೂ ಇದೆ. ಅನೇಕ ತಬ್ಬಲಿ ಜಾತಿಗಳಿಗೆಲ್ಲ ಗಾಂಧೀಯ ತಾಯ್ತನ ಬೇಕಿದೆ. ಗಾಂಧೀಜಿಯ ಅಖಂಡ ಮಾನವೀಯತೆಯನ್ನು ಅಂಬೇಡ್ಕರ್ ಜಾತ್ಯಾತೀತ ತತ್ವದಿಂದ ಸಂವಿಧಾನ ತತ್ವಗಳಲ್ಲಿ ವಿಸ್ತರಿಸಿ ಮಾನವೀಯತೆಯ ನ್ಯಾಯವನ್ನು ಸರ್ವರಿಗೂ ಹಂಚಿದ್ದಾರೆ. ಗಾಂಧೀ ಮತ್ತು ಅಂಬೇಡ್ಕರ್ ಅವರಿಬ್ಬರನ್ನೂ ಇಡೀಯಾಗಿಯೇ ನೋಡಬೇಕು. ದಲಿತ ಸಮಸ್ಯೆಯ ಬುಡವನ್ನು ಅಂಬೇಡ್ಕರ್ ಬಿಡಿಸಿದರೆ, ಅದರ ತುದಿಯನ್ನು ಗಾಂಧೀವಾದವು ನಿವಾರಿಸುತ್ತದೆ. ಜಾತಿ ವಿನಾಶದಿಂದ ಮಾತ್ರ ಆಧುನಿಕೋತ್ತರ ಜಾತ್ಯತೀತ ಭಾರತವನ್ನು ಕಟ್ಟಲು ಸಾಧ್ಯ. ಅದಕ್ಕಾಗಿ ಯಾವತ್ತೂ ಗಾಂಧೀ ಮತ್ತು ಅಂಬೇಡ್ಕರ್ ಇಬ್ಬರನ್ನೂ ಜೊತೆಯಾಗಿಯೇ ಕರೆದೊಯ್ಯಬೇಕು.

ಭಾರತದಂತಹ ಬಹುಸಂಸ್ಕೃತಿಗಳ ಮನಸ್ಸು ವಿಪ್ಲವಕಾರಿ ಆದುದಲ್ಲ. ಅದು ಅಧ್ಯಾತ್ಮದ ದಿವ್ಯತೆಯಲ್ಲಿ ಸಾಮಾಜಿಕತೆ ಭಾವಿಸುತ್ತದೆ. ಇದಕ್ಕೆ ಗಾಂಧೀವಾದವು ಹೆಚ್ಚು ಹತ್ತಿರವಾಗಿದೆ. ಕಾಲಕಾಲದ ಅಧ್ಯಾತ್ಮದ ಹಾದಿಗಳು ಭಾರತೀಯ ಸಮಾಜಗಳನ್ನು ಸುಧಾರಿಸಲು ಯತ್ನಿಸಿವೆ. ಕ್ರಾಂತಿಯ ಪಲ್ಲಟಗಳು ಅಷ್ಟು ಸುಲಭವಾಗಿ ಭಾರತೀಯ ಸಮಾಜಗಳಲ್ಲಿ ಸಾಧ್ಯವಿಲ್ಲ. ಭಾಗಶಃ ಗಾಂಧೀಜಿಗೆ ಈ ಪರಿ ತಿಳಿದಿತ್ತೇನೊ. ಆದ್ದರಿಂದಲೇ ಅವರು ಅಹಿಂಸೆಯ ದೊಡ್ಡ ಶಕ್ತಿಯನ್ನು ಕಂಡುಕೊಂಡು ಅದರ ಮೂಲಕ ಸಾಮಾಜಿಕ ವ್ಯವಸ್ಥೆಯನ್ನು ತಿದ್ದಲು ಯತ್ನಿಸಿದ್ದು. ಜಾತಿ ವಿನಾಶವನ್ನು ಕೂಡ ಅಧ್ಯಾತ್ಮದ ಒಂದು ದಂಗೆಯನ್ನಾಗಿಯೇ ರೂಪಿಸಬೇಕು. ಮಧ್ಯಕಾಲೀನ ಭಾರತದ ಉದ್ದಕ್ಕೂ ಇಂತಹ ಅವೈದಿಕ ಅಧ್ಯಾತ್ಮದ ದಂಗೆಗಳು ಸಾಕಷ್ಟು ಆಗಿವೆ. ಆ ಮಟ್ಟಿಗೆ ೨೦ನೇ ಶತಮಾನದಲ್ಲಿ ಅಸ್ಪೃಶ್ಯತೆಯ ನಿವಾರಣೆಗೆ ಗಾಂಧೀಜಿ ಮಾಡಿದ್ದು ಕೂಡ ಒಂದು ಬಗೆಯಲ್ಲಿ ಆಧ್ಯಾತ್ಮದ ದಂಗೆಯೇ.

ಜಾತಿ ವ್ಯವಸ್ಥೆಯ ವಿರುದ್ಧ ಕಟುವಾಗಿ ದಂಗೆ ಎದ್ದಂತೆಲ್ಲ ಅದು ದಂಗೆ ಎದ್ದವರನ್ನೇ ತಿಂದು ಹಾಕುವಷ್ಟು ಬಲಶಾಲಿ. ಆದ್ದರಿಂದಲೇ ಅದನ್ನು ಸಹನೆಯಿಂದಲೇ ಪಳಗಿಸಿ ಪಳಗಿಸಿ ಮನುಷ್ಯ ರೂಪಕ್ಕೆ ತಂದು ಮನುಷ್ಯತ್ವ ಕಲಿಸಬೇಕಾಗಿದೆ. ಗಾಂಧೀಜಿ ಹೋರಾಟದ ಹಾದಿ ಮನಃ ಪರಿವರ್ತನೆಯದ್ದು.

– ೨೦೧೧ ಜನವರಿ ೨೬, ಪ್ರಜಾವಾಣಿ ಸಾಭಾರ

ವಿಜ್ಞಾನ ಪ್ರಗತಿಗೆ ಸರ್ವೋದಯ ಚಿಂತನೆ ಅನಿವಾರ್ಯ

– ಸದಾನಂದ ಆರ್

(ವಿಜ್ಞಾನ ಮತ್ತು ತಂತ್ರಜಾಣ ಭರದಿಂದ ಬೆಳೆಯುತ್ತಿದ್ದರೂ ಅವುಗಳ ಸಂಶೋಧನೆಯಲ್ಲಿ ವಿನಾಶದ ಬೀಜಗಳೂ ಅಡಗಿವೆ ಅವುಗಳಿಂದ ಲೋಕಕಲ್ಯಾಣವಾಗಬೇಕಾದರೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸರ್ವೋದಯ ಚಿಂತನೆ ಇರಬೇಕೆಂದು ಲೇಖಕರ ಬಯಸುತ್ತಾರೆ)

"ಒಂದು ವೇಳೆ ಮಾನವನಾಗರೀಕತೆಯು ಈಗ ಕಾಲಿಡುತ್ತಿರುವ ಕೃತಕ ಬುದ್ಧಿಮತೆಯನ್ನೂ, ಕಾಡುತ್ತಿರುವ ಪರಿಸರ ವಿಕೋಪಗಳನ್ನು ಹಾಗೂ ಸುಡುತ್ತಿರುವ ಉಗ್ರವಾದವನ್ನೂ ಮೀರಲು ಸಾಧ್ಯವಾದಲ್ಲಿ, ಬರಲಿರುವ ಶತಮಾನದ ವರೆಗೆ ಬದುಕುಳಿಯುತ್ತದೆ. ಆದರೆ ಇದಷ್ಟೇ ಸಾಲದು. ಮುಂದಿನ ಒಂದು ಸಾವಿರ ವರ್ಷಗಳೊಳಗೆ ಭೂಗ್ರಹದಾಚೆಗೆ ತನ್ನ ವಾಸ ಸ್ಥಾನವನ್ನು ಬದಲಾಯಿಸಕೊಳ್ಳದಿದ್ದಲ್ಲಿ ಮಾನವ ನಾಗರೀಕತೆಯ ಪೂರ್ಣ ಅಂತ್ಯ ನಿಶ್ಚಿತ". ಇದು ಪ್ರಸಿದ್ಧ ಭೌತವಿಜ್ಞಾನಿ ಸ್ಟೀಫನ್ ಹಾಕಿಂಗ್‌ರ ಮಾತುಗಳು.

ಮಾನವನಿಗೆ ಇನ್ನೂ ಸಹಸ್ರಾರು ವರ್ಷಗಳ ಭವಿಷ್ಯವಿದೆಯೇ? ಮಾನವನಾಗಿ ತಾನು ಪೋಷಿಸಿಕೊಂಡು ಬಂದಿರುವ ನಾಗರೀಕತೆಯನ್ನು ಉಳಿಸಿ ಬೆಳಸಿಕೊಂಡು ಹೋಗುವ ಅವಕಾಶ ಅವನಿಗಿದೆಯೇ? ಅದರಲ್ಲೂ ಹೆಚ್ಚುತ್ತಿರುವ ಹಸಿರು ಮನೆ ಪರಿಣಾಮದಿಂದ ಉಬ್ಬುತ್ತಿರುವ ಸಾಗರ ಮಟ್ಟ ಹಾಗೂ ದಿನೇ ದಿನೇ ಹೆಚ್ಚುತ್ತಿರುವ ರೋಗರುಜಿನಗಳಿಂದ ತಪ್ಪಿಸಿಕೊಂಡು ಬದುಕುವ ತಾಕತ್ತು ಅವನಿಗಿದೆಯೇ ಈ ಎಲ್ಲವುದರಿಂದ ಹೇಗೋ ಬಚಾವಾದರೂ, ಮುಂದೊಂದು ದಿನ ನಮ್ಮನ್ನು ಕಾಯುತ್ತಿರುವ ಸೂರ್ಯನೇ ಹಿಗ್ಗುತ್ತಾ ತನ್ನದೇ ಗ್ರಹಗಳನ್ನು ನುಂಗುವುದರೊಂದಿಗೆ ಭೂಮಿಯು ಖಚಿತವಾಗಿ ಇಲ್ಲವಾಗುವ ಪರಿಸ್ಥಿತಿಯಲ್ಲಿ ಮಾನವನ ಭವಿಷ್ಯ ಹಾದಿ ಹೇಗೆಂಬ ಪ್ರಶ್ನೆಯಂತೂ ಇದ್ದೇ ಇದೆ. ಇದೆಲ್ಲದರ ನಡುವೆ, ತನಗೆ ಜನ್ಮ ನೀಡಿದ ಪ್ರಕೃತಿಯು ಒಡ್ಡಿರುವ ಮಿತಿಗಳನ್ನು ಮೀರುತ್ತಲೇ ಬಂದಿರುವ ಮಾನವನಿಗೆ ಭವಿಷ್ಯವನ್ನು ಅನಂತವಾಗಿ ಖಚಿತಪಡಿಸಿಕೊಳ್ಳುವ ಅವಕಾಶವಂತೂ ಇದೆ. ಆದರೆ ಅದನ್ನು ಕಾಣುವ ಕಣ್ಣು ಅವನಿಗೆ ಬೇಕಿದೆ ಅಷ್ಟೆ!

ಇಂತಹುದೊಂದು ಸಾಧ್ಯತೆಯ ಬಗ್ಗೆ ಚರ್ಚಿಸುವುದು ರಷ್ಯಾದ ಭೌತ ವಿಜ್ಞಾನಿ ನಿಕೋಲಾಯ್ ಕರ್ದೊಶ್. ೧೯೬೦ರಷ್ಟು ಹಿಂದೆಯೇ ಮಾನವ ನಾಗರೀಕತೆಯ ಭವಿಷ್ಯದ ಸಾಧ್ಯತೆಗಳ ಕುರಿತು ಮಾತನಾಡಿದ್ದ ಈ ವಿಜ್ಞಾನಿಯ

ಗ್ರಹಿಕೆ ಚಿಂತನ ಯೋಗ್ಯ. ಆತನ ಪ್ರಕಾರ ಮನುಷ್ಯನ ನಾಗರೀಕ ಪ್ರಂಪಚವನ್ನು ಶಕ್ತಿಯ ಮೂಲಗಳ ಬಳಕೆ ಹಾಗೂ ಬಳಕೆಯಾಗುವ ಶಕ್ತಿಯ ಸಾಮರ್ಥ್ಯದ ಆಧಾರದ ಮೇಲೆ ಮೂರು ಹಂತಗಳಾಗಿ ವಿಂಗಡಿಸಬಹುದು. ನಾವೀಗ ಜೀವಿಸುತ್ತಿರುವುದು ಮೊದಲನೆಯ ಹಂತವಾಗಿದ್ದು, ಭೂಗ್ರಹದ ಮೇಲೆ ಲಭ್ಯವಿರುವ ಮೂಲಗಳನ್ನು ಬಳಸಿ ಶಕ್ತಿಯ ಉತ್ಪಾದನೆಯಲ್ಲಿ ತೊಡಗಿದ್ದೇವೆ. ಗಾಳಿಯಿಂದ ಆರಂಭಿಸಿ, ಉಗಿ ಶಕ್ತಿಯವರೆಗೆ ತಲುಪಿ, ಅಣು ಶಕ್ತಿಯನ್ನು ದಾಟಿ, ಈಗ ಸೌರ ಶಕ್ತಿಯನ್ನು ಪೂರ್ಣವಾಗಿ ಬಳಸಿಕೊಳ್ಳುವ ಹಂತದಲ್ಲಿರುವ ಮೊದಲನೆಯ ಹಂತ ೧೦೧೬ ವ್ಯಾಟ್ ಪ್ರಮಾಣದ ಶಕ್ತಿಯ ಉತ್ಪಾದನೆಯೊಂದಿಗೆ ಎರಡನೇ ಹಂತಕ್ಕೆ ಕಾಲಿಡುತ್ತದೆ. ಎರಡನೆಯ ಹಂತವನ್ನು ತಲುಪುವ ಮುನ್ನ ನಾವು ಭೂಮಿಯಲ್ಲಿನ ಬಿರುಗಾಳಿಯನ್ನು ನಿಯಂತ್ರಿಸುವ ಹಾಗೂ ಮಹಾಸಾಗರಗಳ ಮೇಲೆ ನಗರಗಳನ್ನು ಕಟ್ಟುವ ಹಂತದಲ್ಲಿರುತ್ತೇವೆ. ಭೂಮಿಯ ಮೇಲಿನ ಬಹುತೇಕ ಅಂಶಗಳ ಮೇಲೆ ಹಿಡಿತ ಸಾಧಿಸುವ ಸ್ಥಿತಿ ತಲುಪಿರುತ್ತೇವೆ! ಈ ಹಂತವನ್ನು ತಲುಪಲು ಇನ್ನೂ ಕನಿಷ್ಠ ಎರಡು ನೂರು ವರ್ಷದಿಂದ ಐದು ನೂರು ವರ್ಷಗಳು ಬೇಕಾಗಬಹುದು.

ಎರಡನೆಯ ಹಂತದ ನಾಗರೀಕತೆಯ ಸ್ಥಾಪನೆ ೧೦೨೬ ವ್ಯಾಟ್ ಪ್ರಮಾಣದ ಶಕ್ತಿಯ ಉತ್ಪಾದನೆಯೊಂದಿಗೆ ಆಗುತ್ತದೆ. ಈ ಹಂತದಲ್ಲಿ ಶಕ್ತಿಯ ಮೂಲವಾಗಿ ಸೂರ್ಯನನ್ನು ಹಾಗು ಸೌರ ವ್ಯೂಹದ ಆಸುಪಾಸಿನಲ್ಲಿ ಲಭ್ಯವಿರುವ ಎಲ್ಲಾ ಶಕ್ತಿ ಮೂಲಗಳನ್ನು ಮಾನವ ಬಳಸಿಕೊಳ್ಳುತ್ತಾನೆ. ಇಷ್ಟು ಶಕ್ತಿಯನ್ನು ಪಡೆದು ಮಾನವ ಭೂಮಿಯ ಮೇಲೆ ಇಂದು ಕಾಡುತ್ತಿರುವ ಅನೇಕ ವೈಪರೀತ್ಯಗಳಿಂದ ದೂರವಾಗಿ ಅಕ್ಕಪಕ್ಕದ ಗ್ರಹಗಳನ್ನು ತನ್ನ ಅಗತ್ಯ ತಕ್ಕಂತೆ ಮಾರ್ಪಾಡಿಸಿಕೊಂಡು ಜೀವಿಸ ತೊಡಗುತ್ತಾನೆ. ಆಕಾಶಗಂಗೆ ಗ್ಯಾಲಾಕ್ಸಿಯಲ್ಲಿರುವ ನಕ್ಷತ್ರಗಳನ್ನು ತನ್ನ ಇಷ್ಟಕ್ಕೆ ತಕ್ಕಂತೆ ಬಳಸಿಕೊಳ್ಳುವ ಶಕ್ತಿ ಹೊಂದುವ ಮಾನವ ನಾಗರೀಕ ಸಮಾಜ, ಸೌರವ್ಯೂಹದಾಚೆಗಿರುವ ಗ್ರಹಗಳನ್ನು ಮನೆಯಾಗಿಸಿಕೊಂಡು ವಿಸ್ತರಣೆಯಾಗುತ್ತದೆ! ಮುಂಬರುವ ಐದು ಸಾವಿರ ವರ್ಷಗಳಲ್ಲಿ ನಾಗರೀಕತೆಯು ಈ ಹಂತವನ್ನು ತಲುಪಬಹುದೆಂಬ ಅಂದಾಜು.

ತನ್ನ ಮೂಲ ಗೆಲಾಕ್ಸಿಯನ್ನು ದಾಟಿ ಅಕ್ಕಪಕ್ಕದ ಗೆಲಾಕ್ಸಿಗಳಲ್ಲಿ ನೆಲೆಸುವ ಅವಕಾಶ ಪಡೆಯುವುದರೊಂದಿಗೆ ಮಾನವ ನಾಗರೀಕತೆಯ ಮೂರನೆಯ ಹಂತ ಪ್ರಾರಂಭಗೊಳ್ಳುತ್ತದೆ. ೧೦೩೬ ವ್ಯಾಟ್ ಪ್ರಮಾಣದ ಶಕ್ತಿಯ ಉತ್ಪಾದನೆಯ ಸಾಮರ್ಥ್ಯ ಪಡೆಯುವ ಮಾನವ ಬಿಲಯನ್‌ಗಟ್ಟಲೆ ನಕ್ಷತ್ರಗಳನ್ನು ತನ್ನ ಅಗತ್ಯ ತಕ್ಕಂತೆ ಬಳಸಿಕೊಂಡು ಇಷ್ಟು ಶಕ್ತಿಯನ್ನು ಉತ್ಪಾಸಿಕೊಳ್ಳುತ್ತಾನೆಂದು ನಿಕೋಲಾಯ್ ಅಭಿಪ್ರಾಯ. ಮೂರನೇ ಹಂತದ ಮಾನವ ನಾಗರೀಕತೆಯು ನೈಜ ಅರ್ಥದಲ್ಲಿ ವಿಶ್ವ ಮಾನವ ಸಮಾಜವಾಗಿರುತ್ತದೆ. ವಿಶ್ವದ ಅನಂತದಲ್ಲಿ ಅನಂತವಾಗುವ ಇದು ಸಮಯ ಹಾಗೂ ಭೌತಿಕ (ಟೈಮ್ ಅಂಡ್ ಸ್ಪೇಸ್) ಮಿತಿಗಳನ್ನು ಮೀರಿದ ಬದುಕನ್ನು ಜೀವಿಸುತ್ತದೆ. ಇಂದು ದಿಲ್ಲಿಯಿಂದ ಲಂಡನ್‌ಗೆ ವಿಮಾನವೇರಿ ಹೋಗಿಬರುವಷ್ಟೆ ಸಲೀಸಾಗಿ ವಿಶ್ವದ

ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಬೆಳಕಿನ ವೇಗದಲ್ಲಿ ಚಲಿಸುವ ಸಾಮರ್ಥ್ಯವನ್ನು ಮಾನವ ಇಲ್ಲಿ ಸಂಪಾದಿಸಿರುತ್ತಾನೆ. ಗೆಲಾಕ್ಸಿಯ ಮಿತಿಯನ್ನೇ ದಾಟಿರುವುದರಿಂದ ಸೂರ್ಯನೆಂಬ ನಕ್ಷತ್ರ ಹಿಗ್ಗಿ ಸಿಡಿದರೂ ತೊಂದರೆಯಾಗದು! ಏಕೆಂದರೆ ಆ ವೇಳೆಗಾಗಲೇ ಮಾನವ ಸಮುದಾಯ ಭೂಮಿಯನ್ನು ಬಿಟ್ಟು ವರ್ಷಗಳು ಸಹಸ್ರ ಕಳೆದಿರುತ್ತವೆ!

ಮಾನವ ವಿಶ್ವ ಮಾನವನಾಗುವ ಮೂರನೇ ಹಂತದ ನಾಗರೀಕತೆಯ ಘಟ್ಟ ತಲುಪಲು ಇನ್ನೂ ಒಂದು ಲಕ್ಷ ವರ್ಷಗಳು ಬೇಕಾಗಬಹುದು. ಹೀಗೆ ಹಂತ ಹಂತವಾಗಿ ಎರಡು ಮತ್ತು ಮೂರನೇ ಹಂತವನ್ನು ಈಗಿರುವ ಒಂದನೇ ಹಂತದಲ್ಲಿನ ಮಾನವ ನಾಗರೀಕತೆ ತಲುಪಿಬಿಟ್ಟರೆ, ಕಾಲ ಹಾಗು ಭೌತಿಕ ಮಿತಿಗಳನ್ನು ಮೀರಿದ ಜೀವಿಯಾಗುತ್ತಾನೆ ಮಾನವ. ಇದನ್ನು ಓದುತ್ತಾ ಹೋದಂತೆ ಸರ್ವೋದಯದ ಕನಸು ನನಸಾದಂತೆ ಅನ್ನಿಸಿದ್ದಲ್ಲಿ ಅದು ತಪ್ಪೇನು ಅಲ್ಲ.

ಇದರ ಕುರಿತು ತಮ್ಮ ಪುಸ್ತಕ 'ಪ್ಯಾರಲೆಲ್ ವರ್ಲ್ಡ್ಸ್'ನಲ್ಲಿ ಸುಧೀರ್ಘವಾಗಿ ಚರ್ಚಿಸುವ ಮತ್ತೋರ್ವ ಭೌತ ವಿಜ್ಞಾನಿ ಮಿಶು ಕಾಕು 'ಮಾನವ ನಾಗರೀಕತೆಯ ಮೂರನೇ ಹಂತದ ತಲುಪುವಿಕೆ ನಿಂತಿರುವುದು ಮೊದಲನೇ ಹಂತದ ಯಶಸ್ವಿ ಪೂರೈಕೆಯ ಮೇಲೆ' ಎನ್ನುತ್ತಾರೆ. 'ಹಂತ' ಪದದ ಬದಲು 'ಸ್ವರೂಪ'(ತಜಢಿಟಿಟಿ) ಪದದ ಬಳಕೆ ಮಾಡುವ ಇವರು, ಗಿಗಾವ್ಯಾಟ್‌ನಲ್ಲಿ ಲೆಕ್ಕಿಸುವ (೧೧೯ ವ್ಯಾಟ್) ಶಕ್ತಿಯ ಉತ್ಪಾದಿಸುತ್ತಿರುವ ನಮ್ಮ ನಾಗರೀಕತೆಯನ್ನು ನಾಗರೀಕತೆ ಸ್ವರೂಪ ೦.೭ ಎನ್ನುತ್ತಾರೆ. ಮಾನವರು ತಮ್ಮನ್ನು ತಾವು ಪೂರ್ಣ ಅವಸಾನದಿಂದ ತಪ್ಪಿಸಿಕೊಳ್ಳಲು ನಾಗರೀಕತೆಯ ಸ್ವರೂಪ ಮೂರು ತಲುಪಲೇಬೇಕು. ಆದರೆ ಪ್ರಶ್ನೆಯಿರುವುದು ಮಾನವ ನಿಜಕ್ಕೂ ತನ್ನ ನಾಗರೀಕತೆಯ ಸ್ವರೂಪ ಒಂದು ಪೂರೈಸುತ್ತಾನೋ ಇಲ್ಲವೋ ಎನ್ನುವುದರಲ್ಲಿ ಎನ್ನುತ್ತಾರೆ.

ಸ್ವರೂಪ ಒಂದು ನಾಗರೀಕತೆಯ ಯಶಸ್ವಿ ಪೂರೈಕೆಯನ್ನು ತಡೆಯುವ ಸವಾಲಿರುವುದು ಮಾನವನ ಆಂತರ್ಯದಲ್ಲಿ ಎನ್ನುವ ಅವರು ಅದನ್ನು ಮೀರುವುದು ಕಷ್ಟಸಾಧ್ಯವೆನ್ನುತ್ತಾರೆ. ಧರ್ಮ ಮತ್ತು ನಂಬಿಕೆಗಳ ಕುರಿತು ಮಾನವರಲ್ಲಿರುವ ಭಿನ್ನತೆಗಳಿಂದಾಗಿ ಇಂದು ನಡೆಯುತ್ತಿರುವ ಹಿಂಸಾತ್ಮಕ ಸಂಘರ್ಷಗಳು ನಾಗರೀಕತೆಯು ಸ್ವರೂಪ ಎರಡು ತಲುಪದಂತೆ ಮಾಡುವ ಶಕ್ತಿ ಹೊಂದಿವೆ. ತಂತ್ರಜ್ಞಾನ ಅಭಿವೃದ್ಧಿಯಿಂದ ನಮ್ಮನ್ನು ಇಂದು ಕಾಡುತ್ತಿರುವ ಪರಿಸರ ಮಾಲಿನ್ಯ ಸಂಬಂಧಿ ಅಪಾಯಗಳನ್ನು ಮೀರಲು ಸಾಧ್ಯವಾದರೂ, ಮಾನವನರಲ್ಲಿರುವ ಭೌದ್ಧಿಕ ಹಾಗೂ ಮಾನಸಿಕ ಸಂಕುಚಿತತೆಗೆ ಮದ್ದು ಹುಡುಕುವುದು ಸಾಧ್ಯವಿಲ್ಲ. ಸಂಕುಚಿತತೆಯನನ್ನು ಅರಿವಿನಿಂದ ಮೀರಲು ಸಾಧ್ಯ. ಆದರೆ ಇದೇ ಈಗ ಇಲ್ಲವಾಗಿರುವುದು ಎಂದು ಬೇಸರಿಸುತ್ತಾರೆ. ಕಾಕು ಅವರ ಮಾತುಗಳಲ್ಲಿ ಸರ್ವೋದಯದ ಚಿಂತನೆಗಳನ್ನು ಆಧರಿಸಿದ ಬದುಕಿನ ಅಗತ್ಯತೆಯನ್ನು ಮನಗಾಣಬಹುದು.

ಮಿಶು ಕಾಕು ಅವರ ಪ್ರಕಾರ ಪರಿಸ್ಥಿತಿ ಆರೋಗ್ಯಕರವಾಗಿಲ್ಲದಿದ್ದರೂ, ನಿರಾಶಾದಾಯಕವೇನು ಅಲ್ಲ. ಇದೇ ಸ್ವರೂಪ ೦.೭ ನಾಗರೀಕ ಸಮಾಜವು ಸಾಧಿಸಿರುವ ತಾಂತ್ರಿಕ ಪ್ರಗತಿಗಳು ಸ್ವರೂಪ ಎರಡನ್ನು ತಲುಪಲು ಸಹಕಾರಿಯಾಗಿವೆನ್ನುತ್ತಾರೆ. ಮಾಹಿತಿ ಹೆದ್ದಾರಿಯಾದ ಇಂಟರ್‌ನೆಟ್ ಇಂದು ತಕ್ಕ ಮಟ್ಟಿಗೆ ಸ್ವತಂತ್ರವಾಗಿಯೇ ಉಳಿದಿರುವುದರಿಂದ ಸೂಕ್ತ ಮಾಹಿತಿಯ ಹಂಚುವಿಕೆಗೆ ಯಾವುದೇ ಅಡ್ಡಿಯಿಲ್ಲ. ಪೂರ್ವಾಗ್ರಹ ಪೀಡಿತ ಪಟ್ಟಭದ್ರ ಶಕ್ತಿಗಳ ನಿಯಂತ್ರಣವನ್ನು ಮೀರಿ ಇಂದು ವಿಷಯಗಳ ಅಭಿಪ್ರಾಯಗಳ ವಿನಿಮಯ ತಕ್ಕಮಟ್ಟಿಗೆ ಸಾಧ್ಯವಾಗಿರುವುದರಿಂದ ಸ್ವರೂಪ ೨ರೆಡೆಗೆ ಹೆಜ್ಜೆ ಹಾಕುವ ಅವಕಾಶಗಳು ಮಾನವ ಸಮಾಜಕ್ಕಿದೆ. ಬಹುರಾಷ್ಟ್ರೀಯ ಕಂಪನಿಗಳ ಪಾರುಪತ್ಯದಿಂದಾಗಿ ರಾಷ್ಟ್ರಗಳು ಅಮುಖ್ಯವಾಗುವ ಸಾಧ್ಯತೆಗಳಿರುವುದರಿಂದ ರಾಷ್ಟ್ರ ಚೌಕಟ್ಟುಗಳಾಚೆಗೆ ಚಿಂತಿಸುವ ಮೊದಲ ಅವಕಾಶಗಳು ದೊರೆಯಲಿವೆ. ಜೊತೆಗೆ ಇಂಗ್ಲೀಷ್ ಭಾಷೆಯು ಎಲ್ಲರ ಭಾಷೆಯಾಗುತ್ತಿರುವ ಹಿನ್ನೆಲೆಯಲ್ಲಿ ವಿಚಾರ ವಿನಿಮಯಗಳು ಸರಾಗವಾಗಿ ಸ್ವರೂಪ ೧ಅನ್ನು ಪೂರೈಸುವ ಸಾಧ್ಯತೆಗಳಿವೆ ಎನ್ನುತ್ತಾರೆ. ಅನ್ಯಗ್ರಹ ಜೀವಿಗಳಿಂದ ಮಾನವನಿಗೆ ಪ್ರಸ್ತುತ ಅಪಾಯದ ಸಾಧ್ಯತೆಗಳು ತುಂಬಾ ಕಡಿಮೆ ಎನ್ನುವ ಮಿಶು ಕಾಕು, ಬಾಹ್ಯ ಜೀವಿಗಳಿಗಿಂತ ಸಹ ಮನುಷ್ಯ ಜೀವಿಗಳ ಮಾನಸಿಕ ಕ್ಷೋಭೆ ಪ್ರೇರಿತ ಅಪಾಯಗಳನ್ನು ಮೀರುವ ತುರ್ತು ನಮಗಿದೆ. ಇಲ್ಲವಾದಲ್ಲಿ ಮಾನವ ನಾಗರೀಕತೆ ತನ್ನ ಸ್ವರೂಪ ೧ಅನ್ನು ಪೂರ್ಣಗೊಳಿಸದೆ ನಿರ್ನಾಮವಾಗುತ್ತದೆಂದು ಭವಿಷ್ಯ ನುಡಿಯುತ್ತಾರೆ.

ಮಾನವ ನಾಗರೀಕತೆಯು ಅಪಾಯದ ಹಾದಿಯಿಂದ ದೂರವಿರಲು ಪ್ರಜ್ಞಾಪೂರ್ವಕ ಚಿಂತನೆಯಲ್ಲಿ ಇಡೀ ಮಾನವ ಸಮುದಾಯ ತೊಡಗುವುದೊಂದೆ ದಾರಿಯಾಗಿದೆ. ಮಾನವನ ಸಂಕುಚಿತತೆಗಳನ್ನು ಧಾರ್ಮಿಕ ಕಾರಣಗಳಿಂದ ಸಹಜವೆಂದು ಭಾವಿಸಿದ್ದನ್ನು ಹೇಗೆ ಪ್ರಜ್ಞಾಪೂರ್ವಕವಾಗಿ ಹದಿನೈದು ಹದಿನಾರನೇ ಶತಮಾನದ ಪುನರುಜ್ಜೀವನ ಕಾಲಘಟ್ಟದಲ್ಲಿ ಒಡೆದು ಹಾಕಿ, ಸಮಾನತೆಯ ಆಶಯಗಳ ಹೆದ್ದಾರಿಯಲ್ಲಿ ಮನುಷ್ಯ ಸಮಾಜ ಹೆಜ್ಜೆ ಹಾಕಿತೋ ಅದೇ ಧಾಟಿಯಲ್ಲಿ ಈಗಿರುವ ಮಾನಸಿಕ ಪಿಡುಗನ್ನು ನಿವಾರಿಸಿಕೊಳ್ಳಬೇಕಿದೆ. ಮಾನವನ ಏಳಿಗೆಗೆಂದು ಹೊರಟ ವಿಜ್ಞಾನ ತಂತ್ರಜ್ಞಾನಗಳು ದಿಕ್ಕುತಪ್ಪಿ ಮಾಹಾಯುದ್ಧಗಳಲ್ಲಿ ವಿಜೃಂಭಿಸಿದ್ದನ್ನು ಅರಿತು ಮತ್ತದೇ ತಪ್ಪು ನವ ಧಾರ್ಮಿಕ ಸಂಕುಚಿತತೆಯಲ್ಲಿ ಮರುಕಳಿಸದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಮಾನವ ಸಮಾಜದ ಮೇಲಿದೆ. ನೀರು, ನೆಲೆ, ಭಾಷೆ ಹಾಗು ಧರ್ಮಗಳು ಮನುಷ್ಯರನ್ನು ಛಿದ್ರಗೊಳಿಸುತ್ತಲೇ ಸಾಗಿದರೆ, ಮನುಷ್ಯ ತಾನೇ ತೋಡಿದ ಗುಂಡಿಯಲ್ಲಿ ತಾನೇ ಸಮಾಧಿಯಾಗುತ್ತಾನಷ್ಟೆ ಎಲ್ಲಕ್ಕಿಂತ ಹೆಚ್ಚಾಗಿ, ವರ್ಶನ್ ೧ ರ ನಾಗರೀಕತೆಯನ್ನು ಮಾನವ ಪೂರೈಸ ಬೇಕಿರುವುದು ತಾನು ಚಿರಂಜೀವಿಯಾಗಬೇಕೆಂಬ ಹಮ್ಮಿನಿಂದಲ್ಲ. ಬದಲಿಗೆ ತಾನು ಜನ್ಮವಿತ್ತಿರುವ ತನ್ನ ಮಕ್ಕಳಿಗೊಂದು ನೆಲೆ ಉಳಿಸಿಕೊಡಲಷ್ಟೆ. ಸರ್ವೋದಯದ ಮೂಲ ಆಶಯವೂ ಇದೇ ಅಲ್ಲವೆ?

ಸ್ವರಾಜ್ಯಕ್ಕಾಗಿ ಸರ್ವೋದಯದ ಪುನರೋದಯ ಅಗತ್ಯ

– ಖಾದ್ರಿ ಎಸ್.ಅಚ್ಯುತನ್, ಹಿರಿಯ ಪತ್ರಕರ್ತರು

(ಗಾಂಧೀ ಬಯಸಿದ್ದು ರಾಜಕೀಯ ಸ್ವಾತಂತ್ರ್ಯವನ್ನಷ್ಟೇ ಅಲ್ಲ ರಾಕೀಯ ಸ್ವಾತಂತ್ರ್ಯ ಸ್ವರಾಜ್ಯದಲ್ಲಿ ರೂಪಾಂತರಗೊಳ್ಳಬೇಕೆಂಬುದು ಗಾಂಧೀಜಿಯವರ ಆಶಯವಾಗಿತು. ಅದಕ್ಕಾಗಿ ಸರ್ವೋದಯದ ಪುನರೋದಯ ಆಗಬೇಕೆಂಬುದು ಈ ಲೇಖನದ ಆಶಯ)

ಗಾಂಧಿ ಜಯಂತಿಯಂದು ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಹಾತ್ಮಾಗಾಂಧಿ ಕುರಿತು ಮಾತನಾಡಿದಾಗ ಅವರ ದಕ್ಷಿಣ ಆಫ್ರಿಕಾಕ್ಕೆ ವಕೀಲರಾಗಿ ಅಲ್ಲಿಗೆ ಹೋಗಿ ಮಹಾತ್ಮರಾಗಿ ಭಾರತಕ್ಕೆ ಹಿಂದಿರುಗಿದ ಬಾಪೂ ವ್ಯಕ್ತಿವಿಕಾಸದ ಹಂತಗಳನ್ನು ಮನಸ್ಸಿಟ್ಟು ಕೇಳಿಸಿಕೊಂಡ ವಿದ್ಯಾರ್ಥಿನಿಯೊಬ್ಬಳು ನಾನು ಪ್ರಸ್ತಾಪಿಸಿದ ಜಾನ್ ರಸ್ಕಿನ್ ಅವರ ' ಅನ್ ಟು ದಿಸ್ ಲಾಸ್ಟ್' ಪುಸ್ತಕದಲ್ಲಿ ಮಹಾತ್ಮರನ್ನು ಬಹುವಾಗಿ ಆಲೋಚನೆಗೆ ಹಚ್ಚಿದ ಸಂಗತಿಗಳಾವುವು ಎಂದು ನನ್ನನ್ನು ಪ್ರಶ್ನಿಸಿದಾಗ ಒಂದು ಕ್ಷಣ ನಾನು ಅವಾಕ್ಕಾದೆ. ಗಾಂಧೀಜಿ ಕುರಿತು ಈಗಿನ ಪೀಳಿಗೆಗೆ ಮನವರಿಕೆಯಾಗುವ ರೀತಿಯಲ್ಲಿ ತಿಳಿಸಿಕೊಡಬೇಕು ಎಂಬುದು ನನ್ನ ಗಟ್ಟಿ ಅನಿಸಿಕೆ. ನನ್ನ ಮಾತನ್ನು ಗಮನವಿಟ್ಟು ಕೇಳಿದ ಆ ವಿದ್ಯಾರ್ಥಿನಿ ಗಾಂಧೀಜಿ ಅವರನ್ನು ಈಗಿನ ಪೀಳಿಗೆಗೆ ಸುಸಂಗತಗೊಳಿಸುವುದು ಕಷ್ಟ ಸಾಧ್ಯವೇನಲ್ಲ ಎನ್ನುವುದನ್ನು, ನನಗೆ ಖಾತರಿಪಡಿಸಿದಳು.

ಇಂದಿನ ಪೀಳಿಗೆಗೆ ಗಾಂಧೀಜಿ, ವಿನೋಬಾ, ಜೆ.ಪಿ., ಸರ್ವೋದಯ ಈ ಕುರಿತು ಮನವರಿಕೆ ಮಾಡಿಕೊಡುವ ಕೆಲಸ ಬಹಳ ಜರೂರಾಗಿ ಆಗಬೇಕಾಗಿದೆ. ಸ್ವಾತಂತ್ರ್ಯ ಬಂದ ತರುಣದ ಪೀಳಿಗೆಯವರಾದ ನಮಗೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಭಾಗವಹಿಸಿದ್ದ ಹಿರಿಯರನ್ನು ನೋಡುವ, ಅವರ ಮಾತುಗಳನ್ನು ಕೇಳುವ ಅವಕಾಶ ಇತ್ತು. ಆದರೆ ಈಗಿನ ಪೀಳಿಗೆಗೆ ಆ ಸದವಕಾಶ ಇಲ್ಲ. ಅವರಿಗೆ ಬೇರೆಯದೇ ನಮೂನೆಯ ಐಕಾನ್– ಆದರ್ಶ – ಹಾಗೂ ಆದ್ಯತೆಗಳು ಗೋಚರಿಸುತ್ತಿವೆ.

ಗಾಂಧಿ ಅಪ್ರಸ್ತುತವೇನೋ ಎನ್ನುವಷ್ಟರ ಮಟ್ಟಿಗೆ ಈ ಹೊತ್ತು ನಮ್ಮ ದೇಶದಲ್ಲಿ ಪರಿಸ್ಥಿತಿಯ ನಿರ್ಮಾಣವಾಗಿದೆ ಮೂರು ಕಾರಣಗಳಿಂದ. ಅವೆಂದರೆ;

ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ. ಇವುಗಳಿಗೆ ಪೂರಕವಾಗಿ ಹಿಂದುತ್ವದ ನಕಾರಾತ್ಮಕ ಆಯಾಮ ಕೂಡಿಕೊಂಡು, (ಕ್ರೋನಿ ಕ್ಯಾಪಿಟಲಿಸಮ್) ಸುಲಭ ಬಂಡವಾಳವಾದವೇ ಇಂದು ಸಕಲವೂ ಆಗಿದೆ. ರಾಷ್ಟ್ರೀಯವಾದದ ಏಕಸ್ವಾಮ್ಯತೆ ಭಾರತೀಯ ಸಂಸ್ಕೃತಿಯ ಸಂರಕ್ಷಣೆಯ ಪೊಲೀಸರು, ಜಾತಿವಾದಿ, ಕೋಮುವಾದಿ ಮತ್ತು ಜನಾಂಗೀಯ ಪ್ರತ್ಯೇಕತಾವಾದಗಳು ಇಂದಿನ ವಿದ್ಯಮಾನಗಳಾಗಿವೆ. ಇನ್ನು ಆರ್ಥಿಕವಾಗಿ ನಿರುದ್ಯೋಗ, ಪ್ರಾದೇಶಿಕ ಅಸಮತೋಲನ, ಬೇಸಾಯದ ಅವಗಣನೆ, ಪರಿಸರದ ಬೇಕಾಬಿಟ್ಟಿ ನಾಶ ಮತ್ತು ಅಪರಾಧಪ್ರಧಾನ ರಾಜಕಾರಣ ಇಂದಿನ ನಿತ್ಯ ಜೀವನವಾಗಿದೆ.

ಇನ್ನು ರಾಜಕೀಯವಾಗಿ ಅಧಿಕಾರದ ವಿಕೇಂದ್ರೀಕರಣದ ಬದಲಿಗೆ ಅತಿಕೇಂದ್ರೀಕರಣದ ಪ್ರವೃತ್ತಿ ಮತ್ತು ನ್ಯಾಯಾಂಗ ವಿಶ್ವವಿದ್ಯಾಲಯಗಳೂ, ಸಂಶೋಧನಾ ಸಂಸ್ಥೆಗಳೂ, ಮಾಧ್ಯಮಗಳೂ ತಮ್ಮ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಕಳೆದುಕೊಂಡಿರುವ ಪರಿಸ್ಥಿತಿಯನ್ನು ಕಂಡಿವೆ. ಅಭಿವೃದ್ಧಿ ಕೊರತೆ, ನ್ಯಾಯಪರತೆಯ ಕೊರತೆ, ಆಡಳಿತ ಕೊರತೆ, ರಾಷ್ಟ್ರ ನಿರ್ಮಾಣದ ಕೊರತೆ, ಪೌರತ್ವ ಕೊರತೆ ಮಿಗಿಲಾಗಿ ಲೋಕತಾಂತ್ರಿಕತೆಯ ಕೊರತೆ ಇಂದಿನ ಭಾರತದ ಸ್ಥಿತಿಯಾಗಿದೆ.

ವ್ಯಕ್ತಿ ಮತ್ತು ವ್ಯವಸ್ಥೆ ಎರಡೂ ಏಕಕಾಲದಲ್ಲಿ ಬದಲಾಗಬೇಕು. ಒಂದು ಇನ್ನೊಂದಕ್ಕೆ ಕಾಯುವಂತಿಲ್ಲ, ಒಂದರಿಂದ ಮತ್ತೊಂದರ ಪರಿವರ್ತನೆ, ಕಟ್ಟಕಡೆಯವರೆಗೆ ಮೊದಲನೆಯದರ ಗಮನ. ಮನೆಯಂಗಳಕ್ಕೆ, ಮನದಂಗಳಕ್ಕೆ ಒಂದು ನೀತಿ, ಪೇಟೆ ಬೀದಿಗೆ ಮತ್ತೊಂದು ನೀತಿ. ಈ ಎರಡೆರಡು ಬಗೆಯ ನಡವಳಿಕೆ. ಒಂದಕ್ಕೊಂದು ವಿರುದ್ಧ. ದ್ವಂದ್ವದ ಇಕ್ಕಳದ ನಡುವೆ ಸಿಕ್ಕಿಕೊಂಡಿರುವ ಭಾರತೀಯ ಸಮಾಜ.

ಇವೆಲ್ಲವನ್ನೂ ಕೂಡಿಸಿ ಹೇಳುವುದಾದರೆ ಮಹಾತ್ಮಾಗಾಂಧಿ ವಿಚಾರ ಪ್ರಣೀತ ಸ್ವರಾಜ್ ಇಂದು ನಮ್ಮಿಂದ ಬಹುದೂರ ಮಾಯವಾಗಿಬಿಟ್ಟಿದೆ. ಈಗ ಶಿಕ್ಷಣ ಸ್ವರಾಜ್, ಸ್ವಾಸ್ಥ್ಯ ಸ್ವರಾಜ್‌ನಂತಹ ವಿಚಾರಗಳನ್ನು ಜನಸಾಮಾನ್ಯರಲ್ಲಿ ಬಿಂಬಿಸುವ ವ್ಯವಸ್ಥೆಯೇ ಇಲ್ಲದಂತಹ ಸ್ಥಿತಿಯಲ್ಲಿ ನಾವಿದ್ದೇವೆ. ಚುನಾವಣಾ ರಾಜಕಾರಣ ಓಟಿನ ರಾಜಕಾರಣವಾಗಿದೆ. ಇನ್ನು ನಾಗರಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಹೋರಾಡುವ ರಾಜಕೀಯೇತರ ಸ್ವಯಂಸೇವಾ ಸಂಸ್ಥೆಗಳನ್ನು ಆಡಳಿತ ವ್ಯವಸ್ಥೆ ಗುಮಾನಿಯಿಂದ ನೋಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ವೋದಯ ಸಮಾಜದ ಪರಿಕಲ್ಪನೆಯೇ ಮಾಯವಾಗಿಬಿಟ್ಟಿದೆ. ಆಂತರಿಕ ಪ್ರಜಾಪ್ರಭುತ್ವ, ಪಾರದರ್ಶಕ ಲೆಕ್ಕಾಚಾರ ಮತ್ತು ಪ್ರಾಮಾಣಿಕತೆ ಇವುಗಳನ್ನು ಆಧಾರವಾಗಿ ಹೊಂದಿದ್ದ ಆಂದೋಲನವೊಂದರ ಅಗತ್ಯ ಅಂದರೆ ಸ್ವರಾಜ್ಯಕ್ಕಾಗಿ

ಸಾಮಾಜಿಕ ಪರಿವರ್ತನೆಯ ರಾಜಕಾರಣದಲ್ಲಿ ವಿಶ್ವಾಸವಿರುವ ಜನರ ಸಂಘಟನೆಯೊಂದರ ಅವಶ್ಯಕತೆ ಬಹಳವಾಗಿದೆ. ಇದು ಚುನಾವಣಾ ಅವಕಾಶವಾದಿತನದಿಂದ ನೇತಾವಾದ, ಪೈಸಾವಾದ, ಜಾತಿವಾದಗಳಿಂದ ದೂರವಾಗಿರುವಂತಹ ವೈಯಕ್ತಿಕ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳ ತಳಹದಿ – ಇವೇ ಭಾರತೀಯ ಸ್ವಾತಂತ್ರ್ಯ ಆಂದೋಲನದ ಮೂಲ ಸೋಪಾನಗಳಾಗಿದ್ದವು – ತಳಹದಿ ಮೇಲೆ ಸರ್ವೋದಯ ಆಂದೋಲನ ಸಂಘಟಿಸುವ ಕೆಲಸ ಆಗಬೇಕಾಗಿದೆ.

ಗಾಂಧೀಜಿಯನ್ನು ಅಕ್ಷರಶಃ ಅರ್ಥೈಸಿಕೊಂಡರೆ ಸಾಲದು, ಭಾವಶಃ ಗ್ರಹಿಸಬೇಕು. ಬಾಪೂ ವಿಚಾರ ನಿಂತ ನೀರಲ್ಲ. ಹರಿಯುವ ಗಂಗೆ. ಸದಾ ಹೊಸತು. ಅನುಭವದ ಜರಿಗಳೆಲ್ಲಾ ಹರಿದು ಅದು ತುಂಬಿತ್ತು. ನಿತ್ಯ ನೂತನವಾಗಿ ಕೇಡಿನೊಡನೆ ಕಡೆತನಕ ಹೋರಾಡಲು ಸ್ಫೂರ್ತಿ ನೀಡಿತು.

ಒಂದು ಕರಿಮೋಡದಂಚಿನ ಆಶಾಕಿರಣವೆಂದರೆ ಮಹಾತ್ಮಾಗಾಂಧಿಯನ್ನು ಕುರಿತು ಇಂದಿಗೂ ಪ್ರಕಟವಾಗುತ್ತಿರುವ ಪುಸ್ತಕಗಳು. ಆದರೆ ಈ ಪುಸ್ತಕಗಳು ಇಂಗ್ಲಿಷ್ ಭಾಷೆಗಷ್ಟೇ ಸೀಮಿತವಾಗಬಾರದು. ಬೇರೆ ಭಾರತೀಯ ಭಾಷೆಗಳಲ್ಲೂ ಪ್ರಕಟಗೊಳ್ಳಬೇಕು. ಸಿದ್ದವನಹಳ್ಳಿ ಕೃಷ್ಣಶರ್ಮರ 'ಪರ್ಣಕುಟಿ' ಮತ್ತು 'ವರ್ಧಾಯಾತ್ರೆ' ಪುಸ್ತಕಗಳನ್ನು ಶಾಲಾ ಕಾಲೇಜುಗಳ ಪಠ್ಯಕ್ರಮ ಭಾಗವಾಗಿ ಮಾಡುವುದರಿಂದ ಈ ಪೀಳಿಗೆಯುವರಿಗೆ ಗಾಂಧೀಜಿ ಅವರನ್ನು ಅತಿಸಮರ್ಪಕವಾಗಿ ತಲುಪಿಸುವುದು ಸಾಧ್ಯ.

ಗಾಂಧೀಜಿ ಅವರ ಕಾಸ್ಮೊಪಾಲಿಟನ್ ವ್ಯಕ್ತಿತ್ವದ ಪರಿಚಯವನ್ನು ಹೆಚ್ಚು ಹೆಚ್ಚಾಗಿ ಇಂದಿನ ಪೀಳಿಗೆಯಲ್ಲಿ ಬಿಂಬಿಸುವ ಅಗತ್ಯವಿದೆ. ಇದಕ್ಕೆ ಅವರ ಬದುಕಿನ ಹಲವಾರು ಪುಟ್ಟ ಪುಟ್ಟ ಘಟನೆಗಳನ್ನು ಹೆಚ್ಚು ಪ್ರಚುರಪಡಿಸುವುದರಿಂದ ಗಾಂಧಿ ನಮಗೆ ಹೆಚ್ಚು ಹತ್ತಿರವಾಗುತ್ತಾರೆ. ಒಣ ಶುಷ್ಕ ತತ್ವ ಪ್ರಚಾರದಿಂದಲೇ ಗಾಂಧೀಜಿಯನ್ನು ಸಾಮಾನ್ಯರಿಂದ ದೂರ ಮಾಡಿಬಿಟ್ಟಿದ್ದೇವೆ.

ವಿಚಾರಗಳು ಮತ್ತು ಅನುಭವಗಳನ್ನು ವೈಯಕ್ತಿಕ ನೆಲೆಯಲ್ಲಿ ಹಂಚಿಕೊಳ್ಳುವ ಗಾಂಧೀಜಿಯವರ ವಿಶಿಷ್ಟ ಆಧುನಿಕ ಸಂವಹನ ಕ್ರಮ ನಮ್ಮ ವಿಚಾರವಂತರಲ್ಲಿ ಮೂಡಬೇಕಾಗಿದೆ. ಶ್ರೀಸಾಮಾನ್ಯನೊಡನೆ ಸಮಾನ ಭಾವ ಗಾಂಧೀಜಿ ಅವರ ಶೈಲಿ ಮತ್ತು ಬೋಧನೆಯ ಸಾರ ಸರ್ವಸ್ವ, ಮನುಷ್ಯರಾಗಿ ಗಾಂಧೀಜಿ ಅವರ ಈ ಸತ್ವವನ್ನು ಮೆಚ್ಚಿಕೊಂಡು ಅವರ ಬರಹ ಬೋಧನೆಗಳನ್ನು ಪ್ರಚುರಪಡಿಸುವುದೇ ನೈಜ ಪ್ರಜಾಪ್ರಭುತ್ವಕ್ಕೆ ಅತ್ಯುತ್ತಮ ಶಿಕ್ಷಣವಾಗುತ್ತದೆ ಎಂದು ಪ್ರಸಿದ್ಧ ಇತಿಹಾಸಕಾರ ರಾಮಚಂದ್ರ ಗುಹಾ ಹೇಳಿರುವ ಮಾತು ಅತ್ಯಂತ ಸಕಾಲಿಕ.

ಸರ್ವ ಸೇವಾ ಸಂಘದ ಧ್ಯೇಯೋದ್ದೇಶಗಳು

ಸತ್ಯ ಮತ್ತು ಅಹಿಂಸೆ ಆಧಾರಿತ ಸಮಾಜವನ್ನು ನಿರ್ಮಿಸುವುದು ಸರ್ವ ಸೇವಾ ಸಂಘದ ಗುರಿಯಾಗಿದೆ. ಅಂತಹ ಸಮಾಜದಲ್ಲಿ ಇಡೀ ಜೀವನ ಪದ್ಧತಿ ಮಾನವೀಯ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಿಂದ ಓತಪ್ರೋತವಾಗಿರುತ್ತದೆ. ಅಲ್ಲಿ ಶೋಷಣೆ, ಅನೈತಿಕತೆ, ದಬ್ಬಾಳಿಕೆ ಅಥವಾ ಅನ್ಯಾಯ ಲವಲೇಶವೂ ಇರುವುದಿಲ್ಲ. ಅಷ್ಟೇ ಅಲ್ಲ ಅಲ್ಲಿ ವ್ಯಕ್ತಿಯ ವ್ಯಕ್ತಿತ್ವದ ಪರಿಪೂರ್ಣ ವಿಕಾಸಕ್ಕೆ ಅವಕಾಶವಿರುತ್ತದೆ.

ಈ ಗುರಿ ತಲುಪುವುದಕ್ಕಾಗಿ ಸರ್ವಸೇವಾ ಸಂಘ ರಾಜ್ಯ ಶಕ್ತಿಯನ್ನು ಪಡೆಯುವ ಹಂಬಲದಿಂದ ದೂರವಿರುತ್ತದೆ. ಪಕ್ಷಾಧಾರಿತ ರಾಜಕಾರಣಕ್ಕಾಗಿ ಪರ್ಯಾಯವಾಗಿ ಲೋಕನೀತಿಯ ಆಧಾರದ ಮೇಲೆ ಪ್ರಜಾಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಿಸುತ್ತದೆ. ಅಂಥ ಸಮಾಜದಲ್ಲಿ ಜಾತಿ, ಸಮೂಹ, ಜನಾಂಗ, ವರ್ಗ, ಲಿಂಗ, ವರ್ಣ, ಭಾಷೆ, ಪ್ರದೇಶ ಮತ್ತು ದೇಶ ಇತ್ಯಾದಿ ಯಾವುದೇ ಬಗೆಯ ಭೇದಗಳಿರುವುದಿಲ್ಲ. ಸರ್ವರಿಗೂ ಸಮಬಾಳು ಮತ್ತು ಸರ್ವರಿಗೂ ಸಮಪಾಲು ಎಂಬ ಜೀವನ ಪದ್ಧತಿಯನ್ನು ರೂಪಿಸಲು ಶ್ರಮಿಸುತ್ತದೆ. ವಿಕೇಂದ್ರಿಕೃತ ಆರ್ಥಿಕ ಕೈಗಾರಿಕೆಗಳಾದ ಖಾದಿ, ಗ್ರಾಮೋದ್ಯೋಗ, ವ್ಯವಸಾಯ, ಮತ್ತು ಪಶುಸಂಗೋಪನೆ ಬದುಕಿನ ಮಾರ್ಗಗಳಾಗಿರುತ್ತದೆ. ಸಂಘವು ತನ್ನ ಕಾರ್ಯಕ್ರಮಗಳ ಮೂಲಕ ಶಾಂತಿ, ಪ್ರೇಮ, ಅನುಕಂಪ, ಜೀವನ ಗೌರವ ಮುಂತಾದ ಭಾವನೆಗಳನ್ನು ಜನರಲ್ಲಿ ಉದ್ದೀಪನಗೊಳಿಸುವುದು. ಸರ್ವೋದಯ ಸಮಾಜ ರಚನೆಗಾಗಿ ಅಹಿಂಸೆಯ ಮಾರ್ಗದ ಮೂಲಕ ಲೋಕನೀತಿಯನ್ನು ಸ್ಥಾಪಿಸುವುದು. ಅಗತ್ಯವಿದ್ದಲ್ಲಿ ಸತ್ಯಾಗ್ರಹದ ಕ್ರಮಗಳನ್ನು ಕೈಗೊಳ್ಳುವುದು.

ಲೋಕಸೇವಕರ ಪ್ರತಿಜ್ಞೆ
KANNADA VERSION OF LOKSEVAK PLEDGE

೧. ಸರ್ವ ಸೇವಾ ಸಂಘದ ಧ್ಯೇಯೋದ್ದೇಶಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ. ಅವುಗಳಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆಯೆಂದು ಘೋಷಿಸುತ್ತೇನೆ. ಅವುಗಳನ್ನು ನನ್ನ ವ್ಯಕ್ತಿಗತ ಜೀವನ ಮತ್ತು ಸಾಮಾಜಿಕ ಜೀವನದಲ್ಲಿ ಅನುಷ್ಠಾನಕ್ಕೆ ತರಲು ಎಲ್ಲ ಪ್ರಯತ್ನ ಮಾಡುತ್ತೇನೆ.

೨. ಸತ್ಯ, ಅಹಿಂಸೆ, ಉತ್ಪಾದಕ ಶರೀರ ಶ್ರಮ ಮತ್ತು ಸಮಾನತೆಗಳನ್ನು ಜೀವನದ ಮೌಲ್ಯಗಳೆಂದು ಒಪ್ಪುತ್ತೇನೆ. ಕೃಷಿ, ತೋಟಗಾರಿಕೆ, ನೂಲುಗಾರಿಕೆ, ಸ್ವಚ್ಛತೆ ಮತ್ತು ಗೊಬ್ಬರ ತಯಾರಿಕೆ ಮುಂತಾದ ಒಂದಿಲ್ಲಒಂದು ಶ್ರಮದ ಕೆಲಸವನ್ನು ನಿಯಮಿತವಾಗಿ ಮಾಡುತ್ತೇನೆ. ನನ್ನ ಬಟ್ಟೆಗಾಗಿ ಪ್ರಮಾಣಿತ ಖಾದಿಯನ್ನೇ ಉಪಯೋಗಿಸುತ್ತೇನೆ. ಮದ್ಯಪಾನ ಮತ್ತು ಇತರ ನಶೆಗಳಿಂದ ದೂರವಿರುತ್ತೇನೆ. ಅಸ್ಪೃಶ್ಯತೆ ಆಚರಿಸುವುದಿಲ್ಲ. ಎಲ್ಲ ಧರ್ಮಗಳ ಬಗ್ಗೆ ಸರಿಸಮಾನ ಗೌರವವಿದೆ. ಸ್ತ್ರೀ ಮತ್ತು ಪುರುಷರಲ್ಲಿ ಸಮಾನ ನಂಬಿಕೆ ಇದೆ.

೩. ಲೋಕನೀತಿಯೊಂದೆ ಪ್ರಜಾಪ್ರಭುತ್ವವನ್ನು ತರಬಲ್ಲದೆಂದು ಮತ್ತು ಅದೊಂದೆ ಪ್ರತಿವ್ಯಕ್ತಿಗೆ ನಿಜ ಸ್ವಾತಂತ್ರ್ಯ ತರುವುದೆಂದು ನಾನು ದೃಢವಾಗಿ ನಂಬುತ್ತೇನೆ. ಈ ದೃಷ್ಟಿಯಿಂದ ನಾನು ಎಂದು ಯಾವುದೇ ರಾಜಕೀಯ ಪಕ್ಷದ ಸದಸ್ಯನಾಗುವುದಿಲ್ಲ ಮತ್ತು ಯಾವುದೇ ರಾಜಕೀಯ ಅಧಿಕಾರಕ್ಕಾಗಿ ಸ್ಪರ್ಧೆ ಮಾಡುವುದಿಲ್ಲ . ಪ್ರಜಾಪ್ರಭುತ್ವದ ಮೂಲ ಉದ್ದೇಶಗಳನ್ನು ರಕ್ಷಿಸಲು ಮತ್ತು ಸ್ಥಾಪಿಸಲು ಸದಾ ಪ್ರಯತ್ನಿಸುತ್ತೇನೆ.

೪. ಸಮಾಜದಲ್ಲಿ ಕಟ್ಟ ಕಡೆಯ ಮನುಷ್ಯನನ್ನು ಗಮನದಲ್ಲಿರಿಸಿಕೊಂಡು ನಾನು ಸಮಾಜದ ಹಿತಕ್ಕಾಗಿ ನಿಸ್ವಾರ್ಥ ಭಾವನೆಯಿಂದ ಸೇವೆ ಮಾಡುತ್ತೇನೆ. ನನ್ನ ಗುರಿಗಳನ್ನು ಈಡೇರಿಸಿಕೊಳ್ಳಲು ಯಾವುದೇ ಬಗೆಯ ಅಪಮಾರ್ಗವನ್ನು ಅನುಸರಿಸುವುದಿಲ್ಲ.

೫. ಅಸತ್ಯ ಮತ್ತು ಅನ್ಯಾಯವನ್ನು ಎದುರಿಸಲು ನಾನು ಸದಾ ಸಿದ್ಧನಾಗಿರುತ್ತೇನೆ.

೬. ನಾನು ನಿಯಮಿತವಾಗಿ ಅಧ್ಯಯನಕ್ಕೆ ಸಮಯ ಕೊಡುತ್ತೇನೆ.

೭. ನಾನು ಇಪ್ಪತ್ತೈದು ರೂಪಾಯಿಗಳನ್ನು ಅಥವಾ ಖಾದಿದಾರದ ಐದು ಲಡಿಗಳನ್ನು ಪ್ರತಿವರ್ಷ ಸದಸ್ಯತ್ವ ಶುಲ್ಕವನ್ನಾಗಿ ಕೊಡುತ್ತೇನೆ.

ಲೋಕಸೇವಕರ ಪೂರ್ಣ ಹೆಸರು ಮತ್ತು ವಿಳಾಸ

______________________ ______________________

______________________ ಲೋಕಸೇವಕರ ಹಸ್ತಾಕ್ಷರ

______________________ ದಿನಾಂಕ:–______________

ದೂರವಾಣಿ :– ______________________

ಸಮರ್ಥಕರ ಪೂರ್ಣ ಹೆಸರು ವಿಳಾಸ

೧. ಹೆಸರು ______________________

ವಿಳಾಸ ______________________

ಯಾವ ವರ್ಷದಿಂದ ಲೋಕಸೇವಕರು ______________________

ದೂರವಾಣಿ:__________ದಿನಾಂಕ :________ ಹಸ್ತಾಕ್ಷರ ______________

೨. ಹೆಸರು ______________________

ವಿಳಾಸ ______________________

ಯಾವ ವರ್ಷದಿಂದ ಲೋಕಸೇವಕರು ______________________

ದೂರವಾಣಿ:__________ದಿನಾಂಕ :________ ಹಸ್ತಾಕ್ಷರ ______________

ಸರ್ವೋದಯ ಮಿತ್ರತ್ವದ ನಮೂನೆ

KANNADA VERSION OF MEMBERSHIP FORM FOR FRIEND OF SARVODAYA

೧. ಸತ್ಯ ಮತ್ತು ಅಹಿಂಸೆಯ ಮೌಲ್ಯಗಳ ಬಗ್ಗೆ ನನಗೆ ಹೃತ್ಪೂರ್ವಕ ಗೌರವವಿದೆ.

೨. ಸರ್ವ ಸೇವಾ ಸಂಘದ ಧ್ಯೇಯೋದ್ದೇಶಗಳ ಬಗ್ಗೆ ನನ್ನ ಸಹಾನುಭೂತಿ ಇದೆ.

೩. ನನ್ನ ಸಹ ಮಿತ್ರತ್ವದ ಗುರುತಾಗಿ ಸರ್ವ ಸೇವಾ ಸಂಘಕ್ಕೆ ಪ್ರತಿವರ್ಷ ೧೦ರೂ ಕೊಡುತ್ತೇನೆ.

ಪೂರ್ಣ ಹೆಸರು:______________________

ಪೂರ್ಣ ವಿಳಾಸ: ______________________

____

ದೂರವಾಣಿ:______________

ದಿನಾಂಕ: ______________

ಹಸ್ತಾಕ್ಷರ: ______________

ಜನಪದ ಸೇವಾ ಟ್ರಸ್ಟ್ ಸಮಾಚಾರ

ಭೇಟಿ

* ಬೆಂಗಳೂರಿನಿಂದ ಟ್ರಸ್ಟಿನ ಅಭಿಮಾನಿಗಳಾದ ಶ್ರೀ ಸುರೇಶ್ ಕಲಘಟ್ಟಗಿ ಅವರ ಪತ್ನಿ ಶ್ರೀಮತಿ ನಳಿನಿ ಬಂದು ಹೋದರು. ಜನಪದ ಮುದ್ರಣಾಲಯದಲ್ಲಿ ಕೆಲಸಗಾರರಾಗಿದ್ದ ಭಾಗ್ಯ ಅವರ ಮಗಳು ಮತ್ತು ಮೊಮ್ಮಗ ಬಂದು ಹೋದರು.
* ಜಯಚಕ್ರವರ್ತಿ–ಬಿ ರಾಜೇಶ್, ಎಸ್. ಎಸ್.ಶಿವರಾಜು ಮತ್ತು ರಾಜು ಎಂಬ ಯುವಕರು ತಮಿಳುನಾಡಿನಿಂದ ಬಂದರು. ಖಾದಿ ತಯಾರಿಕೆಯನ್ನು ನೋಡಿದರು. ಹೆಚ್ಚಿನ ಮೊತ್ತದ ಖಾದಿಯನ್ನು ಖರೀದಿಸಿದರು. ಅವರು ತಮ್ಮ ಪ್ರದೇಶದಲ್ಲಿ ಕೈಮಗ್ಗ ಉದ್ಯೋಗಕ್ಕೆ ಪುನಃಚ್ಚೇತನ ಕೊಡಲು ಬಯಸಿದ್ದಾರೆ. ವಿಧಾನಸಭೆಯ ಮಾಜಿ ಸಭಾಧ್ಯಕ್ಷರಾದ ಕೆ.ಆರ್.ಪೇಟೆ ಕೃಷ್ಣರವರು ಬಂದು ಹೋದರು.
* ಬೆಂಗಳೂರಿನಿಂದ ಕ್ವಿಕ್ ಸ್ಯಾಂಡ್ ಎಂಬ ಸಂಸ್ಥೆಯ ಬಬಿತಾಜಾರ್ಜ, ರುಮಿತ್‌ರಾಜ್ ಮತ್ತು ಸರ್ವಾಂದಂಡಪಾನಿ ಎಂಬುವವರು ಖಾದಿ ಉದ್ಯಮವನ್ನು ನೋಡಿಕೊಂಡು ಹೋದರು. ಅವರು ಡಿಸೈನ್ ರಿಸರ್ಚ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ.
* ಟ್ರಸ್ಟಿನ ದತ್ತು ಕೇಂದ್ರಕ್ಕೆ ಅಕ್ರಮವಾಗಿ ಸಾಗಿಸಲಪಡುತ್ತಿದ್ದ ಪೋಲೀಸ್ ಇಲಾಖೆ ವಶಕ್ಕೆ ತೆಗೆದುಕೊಂಡಿದ್ದ ೬ ಪುಟ್ಟ ಮಕ್ಕಳನ್ನು ರಕ್ಷಣೆ ಮತ್ತು ಪೋಷಣೆಗಾಗಿ ಇಲಾಖೆಯಿಂದ ಕಳುಹಿಸಲ್ಪಟ್ಟವು.
* ಎಮಿಲಿ ಡೈಮೋಂಡ್ ಎಂಬ ಇಂಗ್ಲೆಂಡಿನ ಮಹಿಳೆ ಆದೇಶದ ಕಾರ್ನವಾಲ್ ಪ್ರಾಂತ್ಯದ ಫೆನ್‌ಡ್ರಿನ್ ಎಂಬಲ್ಲಿ ಖಾದಿ ಭಂಡಾರವನ್ನು ಪ್ರಾರಂಭಿಸುವ ಉದ್ದೇಶ ಹೊಂದಿದ್ದಾರೆ. ಅದಕ್ಕಾಗಿ ಟ್ರಸ್ಟಿನಲ್ಲಿ ತಯಾರಾದ ಖಾದಿ ಬಟ್ಟೆಯನ್ನು ಖರೀದಿಸಿದರು.
* ಇತ್ತೀಚೆಗೆ ದೂರದರ್ಶನ ಚಂದನ ವಾಹಿನಿಯಲ್ಲಿ ಟ್ರಸ್ಟಿನಲ್ಲಿಯ ಖಾದಿ ಉದ್ಯಮದ ಬಗ್ಗೆ ಪರಿಚಯಾತ್ಮಕ ವಿಷಯ ಪ್ರಸಾರವಾಯಿತು.

ಮುಸ್ಸಂಜೆಯ ಬೆಳಕಿನಲ್ಲಿ.....

– ಸುರೇಂದ್ರ ಕೌಲಗಿ

ಈಗ ನನಗೆ ಎಂಭತ್ನಾಲ್ಕು ವರ್ಷ. ನನ್ನ ಸುತ್ತಲು ಯುವ ಪಡೆಯಿದೆ, ಮಕ್ಕಳ ಸಮೂಹವಿದೆ ಮನೆಯ ಹಿತ್ತಲಲ್ಲಿ ಮತ್ತು ಅಂಗಳದಲ್ಲಿ ದೃಷ್ಟಿಗೆ ಮುದ ನೀಡುವ ಹಸಿರು ಇದೆ. ಹಿತ್ತಲಲ್ಲಿರುವ ಕಲ್ಲು ಬೇಂಚ್ ಮೇಲೆ ಹಾಕಿದ ಅಕ್ಕಿಯನ್ನು ತಿನ್ನಲು ಗುಬ್ಬಚ್ಚಿಗಳ ಹಿಂಡೇ ಬರುತ್ತದೆ. ಜೊತೆಗೆ ಮೈನಾ, ಅಳಿಲು, ಕಾಗೆ, ಕಾಡುಪಾರಿವಾಳ ಬಂದು ಅಕ್ಕಿಕಾಳನ್ನು ತಿಂದು ಹೋಗುತ್ತವೆ. ಕೆಲವೊಂದು ಸಲ ಕೋತಿಗಳು ಬಂದು ಅಕ್ಕಿಕಾಳನ್ನು ತಿನ್ನುತ್ತವೆ. ಹೀಗೆ ಸುತ್ತಲೂ ಪುಟಿಯುತ್ತಿರುವ ಜೀವ ಕಾಣುತ್ತದೆ. ಇದೆಲ್ಲದರ ಜೊತೆಗೆ ಹಿತ್ತಲಲ್ಲಿರುವ ದಾಸವಾಳ ಹೂವಿನ ಗಿಡದಲ್ಲಿ ಕೆಂಪನೆ ಹೂಗಳು ಅರಳಿರುವುದನ್ನು ನೋಡುತ್ತೇನೆ. ಹೂವಿನ ಗಿಡದ ತುಂಬ ಇರುವ ಹಸಿರು ಎಲೆಗಳು ಮಧ್ಯೆ ಒಂದು ಹಣ್ಣಾದ ಎಲೆ ಕೂಡ ಇದ್ದು ಅದು ದಾಸವಾಳ ಗಿಡಕ್ಕೆ ತುಂಬ ಶೋಭೆ ತರುವುದನ್ನು ನೋಡುತ್ತೇನೆ. ಆ ಹಣ್ಣೆಲೆ ಗಿಡಕ್ಕೆ ಶೋಭೆ ತರುವ ರೀತಿಯಲ್ಲೆ ನಾನು ನನ್ನ ಸುತ್ತಮುತ್ತ ಇರುವ ಮಕ್ಕಳು ಮತ್ತು ಯುವ ಸಮೂಹದಲ್ಲಿ ಇರಲು ಪ್ರಯತ್ನಿಸಬೇಕಲ್ಲ ಎಂದು ಅನಿಸಿತು. ಜನಪದ ನಿಲಯದ ಮೊಗಸಾಲೆಯ ಕುರ್ಚಿಯ ಮೇಲೆ ಪಶ್ಚಿಮಕ್ಕೆ ಮುಖಮಾಡಿ ಕುಳಿತಾಗ ಸೂರ್ಯಾಸ್ತವಾಗುವುದಕ್ಕೆ ಇನ್ನು ಒಂದೆರಡು ಗಂಟೆಗಳ ಕಾಲ ಇರುವಾಗಲೇ ಮನೆಯ ಮುಂದಿನ ದಾರಿಯಲ್ಲಿ ರೈತರು ತಮ್ಮ ದನಕರುಗಳೊಂದಿಗೆ, ಕುರಿಗಳೊಂದಿಗೆ, ಮನೆಗೆ ಹಿಂದಿರುಗುತ್ತಾರೆ. ಶಾಲಾ ಮಕ್ಕಳು ಅಂದವಾದ ಶಾಲಾ ಸಮವಸ್ತ್ರ ಧರಿಸಿ ನಗುತ್ತಾ, ಕಲೆಯುತ್ತಾ, ಆಟವಾಡುತ್ತ ಮನೆಗೆ ಹಿಂದಿರುಗುತ್ತಾರೆ. ಮಳೆ ಬರುವ ಸೂಚನೆ ಇದ್ದಂಥ ದಿನದಂದು ಪಶ್ಚಿಮ ದಿಕ್ಕಿನಲ್ಲಿ ಕವಿದಿರುವ ಕಾರ್ಮೋಡದ ಅಂಚಿಗೆ ಬೆಳ್ಳಿ ಅಂಚು ಮೂಡಿರುತ್ತದೆ. ಇದೆಲ್ಲವನ್ನೂ ನೋಡಿದಾಗ ಜೀವನ ಬರಡಲ್ಲ, ಎಲ್ಲೆಲ್ಲೂ ಉತ್ಸಾಹವಿದೆ, ಆಸೆಯಿದೆ ಎಂಬ ಅನುಭವ ಆಗುತ್ತದೆ. ಏತನ್ಮಧ್ಯೆ ಜನಪದ ಸೇವಾ ಟ್ರಸ್ಟಿನ ವಿವಿಧ ಸೇವಾ ಚಟುವಟಿಕೆಗಳು ಮತ್ತು ಅದರಲ್ಲಿ ತೊಡಗಿರುವ ತರುಣ ವಯಸ್ಸಿನ ಕೆಲಸಗಾರರು ಮಾಡುವ ಕೆಲಸ ನೋಡುವ ಸಂದರ್ಭ ಬರುತ್ತದೆ. ಟ್ರಸ್ಟಿಗೆ ಬರುವ ಅನೇಕ ಪ್ರಕಾರದ ಅತಿಥಿಗಳ ಜೊತೆಗೆ ಮಾತನಾಡುವ ಅವಕಾಶ ದೊರೆಯುತ್ತದೆ.

ಈ ಎಲ್ಲ ಚೇತೋಹಾರಿ ಸಂಗತಿಗಳು ನಾನು ಸದಾ ನೆನಪಿನಲ್ಲಿಡಲು ಬಯಸುವ ಗಿರಿಜಮ್ಮನವರನ್ನು ಕ್ಷಣ ಕಾಲವಾದರೂ ಮರೆಯಿಸಿ ಬಿಡುತ್ತದೆ. ಅವರು ತೀರಿಹೋಗಿ ಆರು ತಿಂಗಳುಗಳೇ ಕಳೆದು ಹೋದವು. ಅವರಿಲ್ಲದ "ಜನಪದ ನಿಲಯ" ಖಾಲಿಖಾಲಿಯಾಗಿಯೇ ಇರುವಂತೆ ಅನಿಸುತ್ತದೆ.

ಈಗ ಕರ್ನಾಟಕ ರಾಜ್ಯ ಪ್ರಥಮ ಸರ್ವೋದಯ ಸಮಾಜ ಸಮ್ಮೇಳನ ಮೇಲುಕೋಟೆಯಲ್ಲಿ ನಡೆಯುವುದರಿಂದ ಅದರ ಕಾರ್ಯದಲ್ಲಿ ತೊಡಗಿ ದುಃಖವನ್ನು ಮರೆಯುತ್ತಿದ್ದೇನೆ. ಸುತ್ತಲಿನ ಜನರ ಪ್ರೀತಿ ಸಹಕಾರ ಸ್ನೇಹ ಇವೆಲ್ಲವೂ ವೃಧ್ಯಾಪ್ಯವನ್ನು ಮರೆಸಿ ಚಟುವಟಿಕೆಯಿಂದ ಇರುವಂತೆ ಮಾಡುತ್ತದೆ. ಆದ್ದರಿಂದ "ಮುಸ್ಸಂಜೆಯ ಬೆಳಕಿನಲ್ಲಿ" ಎಂಬ ಅಂಕಣವನ್ನು ಕೆಲವು ತಿಂಗಳ ಹಿಂದಯೇ ಪ್ರಾರಂಭಿಸಿ ನಿರಾಸಕ್ತನಾಗಿ ನಿಲ್ಲಿಸಿ ಬಿಟ್ಟಿದ್ದೆ. ಅದನ್ನು ಪುನಃ ಪ್ರಾರಭಿಸುವ ಪ್ರೇರಣೆಯಾಗಿದೆ.ವ ಮುಸ್ಸಂಜೆಯ ತಂಪು ಹೊತ್ತಿನಲ್ಲಿ ಮೂಡಿದ ವಿಚಾರಗಳ ಮೊದಲನೆಯ ಕಂತು ಇದು. ●

ವ್ಯಾಪಕ ಚಿಂತನೆ ಮತ್ತು ವಿಶಿಷ್ಟ ಸೇವೆ

ನಮ್ಮನ್ನು ಏಷ್ಯಿಯಾದವರೆಂದು ಹೇಳಲಾಗುತ್ತಿದೆ. ಭಾರತದ ಹೊರಗೆ ಕಣ್ಣಿ ಹೊರಳಿಸಿದರೆ ನಾವು ಪ್ರಪಂಚದವರು ಎಂದೇ ಹೇಳಬೇಕು. ಏಷ್ಯಾದವರೆಂದರೆ ಜಗಳ ಬರುತ್ತದೆ. ಅದು ಅಪಾಯ ಎಂದು ನಮಗನ್ನಿಸುತ್ತದೆ. ನಾವು ಭಾರತೀಯರು ವಿಶ್ವಮಾನವರೆಂಬ ವ್ಯಾಪಕವಾದ ಭಾವನೆ ಇರಬೇಕು. ನಮ್ಮ ಸೇವೆ ಇಡೀ ಜಗತಿಗೆ ಆಗಬೇಕು ವಿದ್ಯಾಥಿಗಳ ಮುಂದೆ ಪ್ರಪಂಚದ ಕ್ಷೇತ್ರವೆ ಇರಬೇಕು. ಮನುಷ್ಯನು ಯಾವ ಊರಲ್ಲಿ ಇರುತ್ತಾನೋ ಅದನ್ನೇ ಪ್ರಪಂಚದ ಮಧ್ಯ ಬಿಂದು ಎಂದು ತಿಳಿಯಬೇಕು. ಅವನೆದುರು ಇಡೀ ಪ್ರಪಂಚದ ಚಿತ್ರ ವಿರಬೇಕು.

–ವಿನೋಬಾ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ನವೀಕರಿಸಿದ ಚಂದಾದಾರರು

ಶ್ರೀ ಕೆ ಜಿ ಪ್ರಕಾಶ್ – ಮೈಸೂರು
ಶ್ರೀ ಕೆ ನಾಗಾನಂದ – ಮಂಡ್ಯ
ಶ್ರೀ ಎಮ್ ವಿ ಧರಣೇಂದ್ರಯ್ಯ – ಮಂಡ್ಯ
ಶ್ರೀ ಎಚ್ ವಿ ಮಂಜುನಾಥ – ಬೆಂಗಳೂರು
ಶ್ರೀ ಎಮ್ ಎನ್ ಶಿವಶಂಕರ – ಮೈಸೂರು
ಪ್ರೊ॥ ವೆಂಕಟೇಶ ಜಿ – ಬೆಂಗಳೂರು
ಶ್ರೀ ಆಕಾಶ ಬಿ – ಬೆಂಗಳೂರು

ಹೊಸದಾಗಿ ಪತ್ರಿಕೆಗೆ ಚಂದಾದಾರರಾದವರು

ಶ್ರೀ ಡಿ ಎಸ್ ದೊರೆಸ್ವಾಮಿ – ಚಾಮರಾಜನಗರ
ಶ್ರೀ ಎಚ್ ಡಿ ಚೌಡಯ್ಯ – ಹೊಳಲು , ಮಂಡ್ಯ
ಡಾ॥ ನರಸಿಂಹ ಮೂರ್ತಿ – ಬೆಂಗಳೂರು

ಇವರೆಲ್ಲರಿಗೆ ಜನಪದ ವಿಚಾರದ ಕೃತಜ್ಞತೆಗಳು

"ಜನಪದ ವಿಚಾರ"

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಕರ್ನಾಟಕದಲ್ಲಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ "ಜನಪದ ವಿಚಾರ" ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತ–ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಯನ್ನು ಬರೆದು ಆಯಾ ತಿಂಗಳ ೧೫ನೇ ತಾರೀಖಿನೊಳಗೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ ಅಂಚೆ

KA / SK / MND / 470 / 2015-2017
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

JANAPADA VICHARA
Kannada Monthly Digest Edited Printed and Published by Surendra Koulagi at janapada seva Trust Melkote,
Dist- Mandya - 571431. Phone : 08236 299854 Mob:9141700812
e-mail : janapada@yahoo.com - Web : janapada.org
Printed at chandragiri printers, Mandya- Mob: 9945651584, 9739743237